ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ– 48, ಭೂತರಾಮನಹಟ್ಟಿ, ಬೆಳಗಾವಿ – 591156
(ನ್ಯಾಕ್ ಮಾನ್ಯತೆ B+ ಗ್ರೇಡ್– 2021) PM-USHA (MERU)

98ನೇ ಸಾಮಾನ್ಯ ಸಿಂಡಿಕೇಟ್ ಸಭೆ ಹಾಗೂ 2026ನೇ ಸಾಲಿನ 2ನೇ ಸಭೆಯ ನಡಾವಳಿಗಳು

ದಿನಾಂಕ : ಸೋಮವಾರ, 06–04–2026
ಸಮಯ : ಪೂರ್ವಾಹ್ನ 11 : 00 ಘಂಟೆ
ಸ್ಥಳ : ಸಿಂಡಿಕೇಟ್ ಸಭಾಂಗಣ
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ಬೆಳಗಾವಿ.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ– 48, ಭೂತರಾಮನಹಟ್ಟಿ, ಬೆಳಗಾವಿ – 591156
(ನ್ಯಾಕ್ ಮಾನ್ಯತೆ B+ ಗ್ರೇಡ್– 2021) PM-USHA (MERU)

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 98ನೇ ಸಾಮಾನ್ಯ ಸಿಂಡಿಕೇಟ್ ಹಾಗೂ 2026ನೇ ಸಾಲಿನ 2ನೇ ಸಭೆಯನ್ನು ದಿನಾಂಕ 06 ಎಪ್ರಿಲ್ 2026 ರಂದು ಪೂರ್ವಾಹ್ನ 11.00 ಘಂಟೆಗೆ ಜರುಗಿದ ಸಭೆಗೆ ಹಾಜರಿದ್ದ/ಹಾಜರಿರದ ಸದಸ್ಯರುಗಳ ವಿವರ.

I. ಹಾಜರಿದ್ದ ಸದಸ್ಯರು

1.	ಪ್ರೊ. ಸಿ. ಎಂ. ತ್ಯಾಗರಾಜ	ಕುಲಪತಿಗಳು ಹಾಗೂ ಅಧ್ಯಕ್ಷರು
2.	ಡಾ. ಸುಷ್ಮಾ ಆರ್.	ಸದಸ್ಯರು
3.	ಶ್ರೀ ವಿನೀತ್ ವ. ಜೋಶಿ	ಸದಸ್ಯರು
4.	ಶ್ರೀ ಈರಣ್ಣ ಬ. ಹಪ್ಪಲಿ	ಸದಸ್ಯರು
5.	ಡಾ. ನೀಲಪ್ಪ ಬಿ. ಹೊಸಮನಿ	ಸದಸ್ಯರು
6.	ಡಾ. ಎಂ. ಮಹೇಶ	ಸದಸ್ಯರು
7.	ಡಾ. ಶೀಮತಿ ಸುನಿತಾ ಜಿ. ಅಂಗಡಿ	ಸದಸ್ಯರು
8.	ಶ್ರೀ ರಾಮಚಂದ್ರ ಜಿ. ಕಿಲ್ಲೇದಾರ	ಸದಸ್ಯರು
9.	ರಫೀ ಭಂಡಾರಿ	ಸದಸ್ಯರು
10.	ಡಾ. ಮಾರುತಿ ಎಚ್. ಮುಂಡರಗಿ	ಸದಸ್ಯರು
11.	ಡಾ. ಮಹಾಂತೇಶ ಕಂಬಾರ	ಸದಸ್ಯರು
12.	ಡಾ. ಎಸ್.ಎಸ್. ಅಂಗಡಿ	ಸದಸ್ಯರು
13.	ಪ್ರೊ.(ಶ್ರೀಮತಿ) ವ್ಹಿ ಎಸ್. ಶಿಗೇಹಳ್ಳಿ	ಸದಸ್ಯರು
14.	ಪ್ರೊ. ಡಿ. ಎನ್. ಪಾಟೀಲ್ ಕುಲಸಚಿವರು (ಮೌಲ್ಯಮಾಪನ)	ಸದಸ್ಯರು
15.	ಶ್ರೀ. ಸಂತೋಷ ಕಾಮಗೌಡ ಕೆ.ಎ.ಎಸ್.	ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು

II. ಹಾಜರಾಗದ ಸದಸ್ಯರು:

1.	ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ	ಸದಸ್ಯರು
2.	ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ	ಸದಸ್ಯರು
3.	ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ	ಸದಸ್ಯರು
4.	ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ	ಸದಸ್ಯರು
5.	ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ	ಸದಸ್ಯರು
6.	ಡಾ. ಕಾವೇರಿ ಎಚ್.ಎಂ.	ಸದಸ್ಯರು
7.	ಶ್ರೀ. ರವೀಂದ್ರ ಎಂ. ನಾಯ್ಕರ್	ಸದಸ್ಯರು

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ– 48, ಭೂತರಾಮನಹಟ್ಟಿ, ಬೆಳಗಾವಿ – 591156

(ನ್ಯಾಕ್ ಮಾನ್ಯತೆ B+ ಗ್ರೇಡ್– 2021) PM-USHA (MERU)

ಸಿಂಡಿಕೇಟ್ ಪ್ರಾಧಿಕಾರ ಸಭೆಯ ನಡುವಳಿಗಳು

ವಿಷಯ: 06 ಎಪ್ರಿಲ್ 2026 ರಂದು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ವಿಶ್ವವಿದ್ಯಾಲಯದ 98ನೇ ಸಾಮಾನ್ಯ ಹಾಗೂ 2026 ನೇ ಸಾಲಿನ 2ನೇ ಸಿಂಡಿಕೇಟ್ ಸಭೆಯ ನಡುವಳಿಗಳು

ಉಲ್ಲೇಖ: 1. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ (27) (28) (2).

2. ಮಾನ್ಯ ಕುಲಪತಿಗಳು ಸಭೆ ನಡೆಸಲು ನೀಡಿದ ಅನುಮೋದನೆ ದಿ: 04.03.2026.

3. ಸಿಂಡಿಕೇಟ್ ಪ್ರಾಧಿಕಾರ ಸಭೆ ನೋಟಿಸ್ ದಿನಾಂಕ: 04.03.2026.

ಪ್ರಸ್ತಾವನೆ:

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ (28)(2) ರ ಅನುಗುಣವಾಗಿ ಸಿಂಡಿಕೇಟ್ ಪ್ರಾಧಿಕಾರದ 98 ನೇ ಸಾಮಾನ್ಯ ಹಾಗೂ 2026 ನೇ ಸಾಲಿನ 2 ನೇ ಸಿಂಡಿಕೇಟ್ ಸಭೆಯನ್ನು ದಿನಾಂಕ: 06.04.2026ರಂದು ಪೂರ್ವಾಹ್ನ 11.00 ಗಂಟೆಗೆ ಸಿಂಡಿಕೇಟ್ ಸಭಾಂಗಣ, ರಾಚವಿ, ಬೆಳಗಾವಿ ಇಲ್ಲಿ ಆಯೋಜಿಸಲಾಗಿತ್ತು. ಪ್ರಾಚಾರ್ಯರ ಗುಂಪಿನಿಂದ ಸಿಂಡಿಕೇಟ್ ಸದಸ್ಯರಾಗಿ ಆಯ್ಕೆಯಾಗಿರುವ ಡಾ. ನೀಲಪ್ಪ ಹೊಸಮನಿ, ಡಾ. ಎಂ. ಮಹೇಶ, ಡಾ. ರಾಮಚಂದ್ರ ಹೂಗಾರ ಮತ್ತು ಡಾ ಸುನೀತಾ ಅಂಗಡಿ ಇವರುಗಳಿಗೆ ಹೂಗುಚ್ಛ ನೀಡಿ ಸಭೆಗೆ ಬರಮಾಡಿಕೊಳ್ಳಲಾಯಿತು ಹಾಗೂ ಎಲ್ಲ ಸದಸ್ಯರುಗಳು ಪರಸ್ಪರ ಪರಿಚಯ ಮಾಡಿಕೊಂಡರು. ತದನಂತರ, ಸಭೆಯ ಅಧ್ಯಕ್ಷರು ಮತ್ತು ಸದಸ್ಯರುಗಳನ್ನು ಕುಲಸಚಿವರು ಸ್ವಾಗತಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಮಾನ್ಯ ಕುಲಪತಿಗಳು, ಇತ್ತೀಚಿಗೆ ಘನತೆವೆತ್ತ ರಾಜ್ಯಪಾಲರು ಮತ್ತು ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ ಸಚಿವರ ನೇತೃತ್ವದಲ್ಲಿ ರಾಜ್ಯದ ಕುಲಪತಿಗಳನ್ನು ಒಳಗೊಂಡು ಬೆಂಗಳೂರಿನಲ್ಲಿ ಸಭೆಯನ್ನು ಆಯೋಜಿಸಲಾಗಿತ್ತು. ಸದರಿ ಸಭೆಯಲ್ಲಿ ವಿಶ್ವವಿದ್ಯಾಲಯಗಳಲ್ಲಿ ನೀಡಲಾಗುತ್ತಿರುವ ಶೈಕ್ಷಣಿಕ ಗುಣಮಟ್ಟ ಕುಸಿಯುತ್ತಿರುವ ಬಗ್ಗೆ ಹಾಗೂ ಆಧುನಿಕ ತಂತ್ರಜ್ಞಾನ ಸಮಯದಲ್ಲಿ ಅಗತ್ಯಕ್ಕೆ ತಕ್ಕಂತೆ ಕೌಶಲ್ಯಕ್ಕೆ ಸಂಬಂಧಿಸಿದ ಶಿಕ್ಷಣವನ್ನು ಒದಗಿಸಲು ಗಮನ ಹರಿಸಲು ತಿಳಿಸಿ, Convocation, Pension Management, UGC Guidelines, Ph.D Admisition, UUCMS, KTPP ಇವುಗಳನ್ನು ಸೇರಿ ಒಟ್ಟು 12 Protocol ಕುರಿತಾಗಿ ಚರ್ಚಿಸಲಾಗಿದೆ ಎಂದರು ಹಾಗೂ ಸರ್ಕಾರದಿಂದ ಬಂದಿರುವ ಪತ್ರಗಳ ಮಾಹಿತಿಯನ್ನು ಕೂಡ ಸಭೆಗೆ ನೀಡಿದರು.

ಶೂನ್ಯ ಅವಧಿ ಚರ್ಚೆಗಳು

ಡಾ. ಮಹಾಂತೇಶ ಕಂಬಾರ:

ಮಾರ್ಚ್ 25 ರಿಂದ 27 ರವರೆಗೆ ಕರ್ನಾಟಕ ಮುಕ್ತ ವಿಶ್ವವಿದ್ಯಾಲಯ, ಮೈಸೂರು ಮತ್ತು ಪ್ರಜ್ಞಾಪ್ರವಾಹ ಕರ್ನಾಟಕ ಇವರು "ಏಕಾತ್ಮ ಮಾನವ ದರ್ಶನ-ಭಾರತದತ್ತ ವಿಶ್ವದೃಷ್ಟಿ" ಎಂಬ ಕಾರ್ಯಕ್ರಮವನ್ನು ಆಯೋಜಿಸಿರುತ್ತಾರೆ. ಕಾಲೇಜು ಶಿಕ್ಷಣ ಇಲಾಖೆ ಇವರ ಪತ್ರದ ಮೇರೆಗೆ ಸದರಿ ಕಾರ್ಯಕ್ರಮದಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು, ಸಂಶೋಧನಾ ವಿದ್ಯಾರ್ಥಿಗಳು, ಅತಿಥಿ ಉಪನ್ಯಾಸಕರು ಇವರುಗಳಿಗೆ ಭಾಗವಹಿಸಲು ಅನುಮತಿ, OD, ಹಣಕಾಸಿನ ನೆರವು ನೀಡಲಾಗಿದೆ. Government Recognised or Registered Body ಇಲ್ಲದ ಸಂಸ್ಥೆಯು ಸದರಿ ಕಾರ್ಯಕ್ರಮವನ್ನು ಆಯೋಜಿಸಿದ್ದು ಅದರಲ್ಲಿ ವಿಶ್ವವಿದ್ಯಾಲಯದ ಸಿಬ್ಬಂದಿಗಳಿಗೆ ಹಾಜರಾಗಲು ವಿಶೇಷವಾಗಿ ಬೋಧಕೇತರ ಸಿಬ್ಬಂದಿಗಳಿಗೆ ಅನುಮತಿ ನೀಡಿರುವುದಕ್ಕೆ ಆಕ್ಷೇಪಣೆ ವ್ಯಕ್ತಪಡಿಸಿದರು. ಇದಕ್ಕೆ ಸಂಬಂಧಿಸಿದಂತೆ ಪರಿನಿಯಮಗಳಿವೆ? ಹಾಗೂ ಸದರಿ ಕಾರ್ಯಕ್ರಮಕ್ಕೆ ಅಥವಾ ಸಿಬ್ಬಂದಿಗಳಿಗೆ ವಿಶ್ವವಿದ್ಯಾಲಯದಿಂದ

ಅಥವಾ ಪಂಡೀತ ದೀನದಯಾಳ ಉಪಾಧ್ಯಾಯ ಅಧ್ಯಯನ ಪೀಠದಿಂದ ಹಣಕಾಸಿನ ನೆರವು ನೀಡಿದ್ದರೇ ಹಿಂಪಡೆಯಲು, ಸಂಬಂಧಿಸಿದವರ ವಿರುದ್ಧ ಶಿಸ್ತು ಕ್ರಮವಹಿಸಲು ಒತ್ತಾಯಿಸಿದರು.

ಪ್ರತಿಕ್ರಿಯಿಸಿದ ಕುಲಸಚಿವರು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ "ಪಂಡೀತ ದೀನದಯಾಳ ಉಪಾಧ್ಯಾಯ ಅಧ್ಯಯನ ಪೀಠ"ದ ಸಲಹಾ ಸಮಿತಿಯ ಶಿಫಾರಸ್ಸಿನ ಮೇರೆಗೆ ಸದರಿ ಕಾರ್ಯಕ್ರಮಕ್ಕೆ ವಿಶ್ವವಿದ್ಯಾಲಯದಿಂದ 19 ಜನ ಬೋಧಕ ಸಿಬ್ಬಂದಿಗಳು, 06 ಜನ ಬೋಧಕೇತರ ಸಿಬ್ಬಂದಿಗಳು ಮತ್ತು 15 ಜನ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಧೀನದ ಮಹಾವಿದ್ಯಾಲಯಗಳ ಪ್ರಾಚಾರ್ಯರು ಮತ್ತು ಬೋಧಕ/ಬೋಧಕೇತರ ಸಿಬ್ಬಂದಿಗಳನ್ನು ಸೇರಿಸಿ ಒಟ್ಟು 50 ಜನರನ್ನು ನಿಯೋಜಿಸಲಾಗಿದೆ. "ಪಂಡೀತ ದೀನದಯಾಳ ಉಪಾಧ್ಯಾಯ ಪೀಠ"ಕ್ಕೆ ಕೇಂದ್ರ ಸರ್ಕಾರದಿಂದ ಅನುದಾನ(5 ಕೋಟಿ 78 ಲಕ್ಷ) ಮಂಜೂರು ಮಾಡಿ, ಹಣವನ್ನು ಬಳಸಿಕೊಳ್ಳುವ ನಿಯಮಗಳನ್ನು ತಿಳಿಸಿರುತ್ತಾರೆ. ಈ ಕುರಿತಂತೆ ಪರಿನಿಯಮವು ಕೂಡ ಇರುತ್ತದೆ ಹಾಗೂ ಪೀಠದ ಉದ್ದೇಶವು ಮಾನ್ಯರ ಮೂಲಚಿಂತನೆಗಳು, ತತ್ವಗಳು, ಮೌಲ್ಯಗಳನ್ನು ಸಾರುವುದಾಗಿದ್ದು ಇದರ ಭಾಗವಾಗಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ. ಈ ಹಿಂದೆ ಪೀಠದ ವತಿಯಿಂದ ಬೇರೆ ಬೇರೆ ಸಂಘ/ಸಂಸ್ಥೆಗಳೊಂದಿಗೆ ಒಪ್ಪಂದ ಮಾಡಿಕೊಂಡು ಹಲವಾರು ವಿಶೇಷ ಉಪನ್ಯಾಸಗಳು, ಒಡಂಬಡಿಕೆಗಳು, ತರಬೇತಿ, ರಾಜ್ಯ ಮಟ್ಟದ ಸೆಮಿನಾರ್‌ಗಳನ್ನು ಆಯೋಜಿಸಲಾಗಿದೆ ಎಂದರು. "ಏಕಾತ್ಮ ಮಾನವ ದರ್ಶನ-ಭಾರತದತ್ತ ವಿಶ್ವದೃಷ್ಟಿ" ಕಾರ್ಯಕ್ರಮಕ್ಕೆ ಹಾಗೂ ಪಂಡೀತ ದೀನದಯಾಳ ಉಪಾಧ್ಯಾಯ ತತ್ವಕ್ಕೆಂದು 5 ಲಕ್ಷ ರೂಪಾಯಿ ನೀಡಲಾಗಿದೆ ಎಂದರು.

ಮಾನ್ಯ ಕುಲಪತಿಗಳು:

ಕಾಲೇಜು ಶಿಕ್ಷಣ ಇಲಾಖೆಯಿಂದ ಪತ್ರ ಬಂದಿರುವುದರಿಂದ OD ಮಂಜೂರು ಮಾಡಲಾಗಿದೆ. ಈ ಕಾರ್ಯಕ್ರಮವನ್ನು ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು ಆಯೋಜಿಸಿರುವುದಿಲ್ಲ. ಅದಾಗ್ಯೂ ಈ ವಿಷಯಕ್ಕೆ ಸಂಬಂಧಿಸಿದಂತೆ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ರಫೀ ಭಂಡಾರಿ:-

1. ಸ್ನಾತಕೋತ್ತರ ಕೇಂದ್ರ, ವಿಜಯಪುರದಲ್ಲಿ B.Ed Integrated Course ಪ್ರಾರಂಭಿಸಲು ಸಲಹೆ ನೀಡಿದ ಹಿನ್ನೆಲೆಯಲ್ಲಿ ಸಭೆಯು ಸದಸ್ಯರಾದ ಡಾ. ಸುಷ್ಮಾಆರ್. ಇವರನ್ನು ಒಳಗೊಂಡು ಏಕ ಸದಸ್ಯರ ಸಮಿತಿ ರಚಿಸಲು ತೀರ್ಮಾನಿಸಲಾಯಿತು. ಸದರಿ ಸಮಿತಿ ಸಲ್ಲಿಸಿದ ವರದಿಯನ್ವಯ ಕ್ರಮವಹಿಸಲು ಸೂಚಿಸಿತು.
2. ವಿಶ್ವವಿದ್ಯಾಲಯದ ಆಯ್ಯ-ವ್ಯಯ ಬಜೆಟ್‌ನಲ್ಲಿ "Press and Media" ಗೆ ಹೆಚ್ಚಿನ ಹಣವನ್ನು ಕಾಯ್ದಿರಿಸಲು ಮನವಿ ನೀಡಿದ ಹಿನ್ನೆಲೆಯಲ್ಲಿ 25 ಲಕ್ಷ ರೂಪಾಯಿಗಳನ್ನು ಮೀಸಲಿರಿಸಲು ತೀರ್ಮಾನಿಸಲಾಯಿತು.

ಡಾ. ಸುಷ್ಮಾ ಆರ್.

"ಯೋಗಾ ಸ್ಟಡೀಸ್" ಗೆ Specialization ಹೊಂದಿರುವ ನಿರ್ದೇಶಕರನ್ನು ನಿಯೋಜಿಸಲು ಸಲಹೆ ನೀಡಿದರು.

ತದನಂತರ ಕುಲಸಚಿವರು ಈ ಕೆಳಕಾಣಿಸಿದಂತೆ ವಿಷಯಸೂಚಿಗಳನ್ನು ಪ್ರಸ್ತಾಪಿಸಿದರು.

ಕ್ರ. ಸಂ	ಸಂಖ್ಯೆ	ಕಾರ್ಯಸೂಚಿ ವಿವರ ಹಾಗೂ ಕೈಗೊಂಡ ತೀರ್ಮಾನಗಳು
01	2026/04/01	ದಿನಾಂಕ: 09.02.2026 ರಂದು ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ಗೊತ್ತುವಳಿಗಳನ್ನು ಹಾಗೂ ಅನುಪಾಲನಾ ವರದಿಗಳನ್ನು ದೃಢೀಕರಣಕ್ಕಾಗಿ ಸಭೆಯ ಮುಂದಿಡಲಾಯಿತು. **ಅನುಪಾಲನಾ ವರದಿಯ ಸಂಖ್ಯೆ: 2** **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬರುವ ವಿಜಯಪುರ ಜಿಲ್ಲೆಯ ಶ್ರೀಮತಿ ಮೀನಾಕ್ಷಿ ಆರ್ ಕಲ್ಲೂರ ಬಿ.ಎಡಿ ಮಹಾವಿದ್ಯಾಲಯ ಹಾಗೂ ಶ್ರೀ ಮೋನಿಕಾ ಕನ್ನಿ ಶಿಕ್ಷಣ ಮಹಾವಿದ್ಯಾಲಯಗಳಿಗೆ ಸಂಬಂಧಿಸಿದಂತೆ, ವ್ಯವಸ್ಥೆಯನ್ನು ಸರಿಪಡಿಸಲು ಪ್ರತಿ**

		ಮಹಾವಿದ್ಯಾಲಯಕ್ಕೆ 5 ಲಕ್ಷ ದಂಡ ವಿಧಿಸಲು ಹಾಗೂ Face Bio-Metric ಕಡ್ಡಾಯಗೊಳಿಸಲು ಸಭೆಯು ತೀರ್ಮಾನಿಸಿತು. ಮುಂದುವರೆದು, ವಿದ್ಯಾರ್ಥಿಗಳಿಗೆ ಹೆಚ್ಚುವರಿ ಶುಲ್ಕವನ್ನು ವಿಧಿಸುವಂತಿಲ್ಲ ಮತ್ತು ಅನುಪಾಲನಾ ವರದಿಯನ್ನು ಕಡ್ಡಾಯವಾಗಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಷರತ್ತು ವಿಧಿಸಿತು. **ತದನಂತರ, ದಿನಾಂಕ: 09.02.2026 ರಂದು ನಡೆದ ಸಾಮಾನ್ಯ ಸಿಂಡಿಕೇಟ್ ಸಭೆಯ ಗೊತ್ತುವಳಿಗಳ ಅನುಪಾಲನಾ ವರದಿಯನ್ನು ಸಭೆಯು ಪರಿಶೀಲಿಸಿ ಧೃಢೀಕರಿಸಿತು.**
02	2026/04/02	Providing Breaker from Sub-station including erection of new breaker for individual use and their connections from substation to RCU, New Campus, Hirebagewadi, Belagavi ಕಾಮಗಾರಿಯ ಅವಧಿ ವಿಸ್ತರಣೆ ಮಾಡಲು ಅನುಮೋದನೆ ನೀಡುವ ಕುರಿತು.
	ತೀರ್ಮಾನ	**ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ನೂತನ ಆವರಣ ಹಿರೇಬಾಗೇವಾಡಿಯಲ್ಲಿ ಈ ಮೊದಲು ತಾತ್ಕಾಲಿಕವಾಗಿ 88ಕೆವಿ ಯ ವಿದ್ಯುತ್ ಸಂಪರ್ಕವನ್ನು ಪಡೆದುಕೊಳ್ಳಲಾಗಿತ್ತು. ಪ್ರಸ್ತುತ, ಏಪ್ರಿಲ್ 2026 ರಿಂದ ವಿಶ್ವವಿದ್ಯಾಲಯವನ್ನು ನೂತನ ಆವರಣಕ್ಕೆ ಸ್ಥಳಾಂತರಿಸಿ, 2026-27ನೇ ಶೈಕ್ಷಣಿಕ ತರಗತಿಗಳನ್ನು ನೂತನ ಆವರಣದಲ್ಲಿಯೇ ಪ್ರಾರಂಭಿಸುವ ಗುರಿ ಹೊಂದಿದೆ. ಅದರಂತೆ, ನೂತನ ಆವರಣಕ್ಕೆ ಶಾಶ್ವತವಾಗಿ ವಿದ್ಯುತ್ ಸಂಪರ್ಕ ಪಡೆಯಲು Providing Breaker from Sub-station including erection of new breaker for individual use and their connections from substation to RCU, New Campus, Hirebagewadi, Belagavi ಕಾಮಗಾರಿಗೆ ದಿನಾಂಕ: 05.06.2025 ರಂದು ಟೆಂಡರ್ ಆಹ್ವಾನಿಸಿ, ದಿನಾಂಕ: 11.07.2025 ರಂದು L1 ಆಗಿದ್ದ M/S Chetan Electricals (Chetan Banagi) ಇವರಿಗೆ 90 ದಿನಗಳ ಅವಧಿಯನ್ನು ನೀಡಿ, ಕಛೇರಿ ಆದೇಶವನ್ನು ನೀಡಲಾಗಿತ್ತು.** **ಪ್ರಸ್ತುತ ಸದರಿ ಕಾಮಗಾರಿಗೆ ಮುಖ್ಯ ಅಭಿಯಂತರರು, ವಿದ್ಯುತ್ ವಿಭಾಗ (KPTCL), ಬೆಂಗಳೂರು ಇವರಿಂದ ಗುತ್ತಿಗೆದಾರರು Sanction ಗಾಗಿ ಅನುಮೋದನೆಯನ್ನು ಪಡೆದುಕೊಂಡು ಮುಂದಿನ ಕ್ರಮವಹಿಸಬೇಕಾಗಿದ್ದರಿಂದ, ಕಾಮಗಾರಿಯು ತಡವಾಗಿ ಆರಂಭಗೊಂಡು ಕಾರ್ಯಪ್ರಗತಿಯಲ್ಲಿರುತ್ತದೆ. ಕಾರಣ, Providing Breaker from Sub-station including erection of new breaker for individual use and their connections from substation to RCU, New Campus, Hirebagewadi, Belagavi ಕಾಮಗಾರಿಗೆ ದಿನಾಂಕ: 30.04.2026 ರವರೆಗೆ ದಂಡರಹಿತವಾಗಿ ಅವಧಿಯನ್ನು ವಿಸ್ತರಿಸಲು ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿತು.**
03	2026/04/3	Work to establish a Research wing to temporarily house the equipments of science and other departments purchased under PM-USHA(MERU) in new campus Hirebagewadi ಕಾಮಗಾರಿಗೆ ಸಂಬಂಧಿಸಿದಂತೆ Workslip ಕಾರ್ಯ ನಿರ್ವಹಿಸುವ ಕುರಿತು.
	ತೀರ್ಮಾನ	**ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ನೂತನ ಆವರಣ, ಹಿರೇಬಾಗೇವಾಡಿಯಲ್ಲಿ ಪ್ರಸ್ತುತ PM-USHA (MERU) ಯೋಜನೆಯಡಿಯಲ್ಲಿ ಖರೀದಿಸಲಾದ ವಿಜ್ಞಾನ ಹಾಗೂ ವಿವಿಧ ವಿಭಾಗಗಳ ಉಪಕರಣಗಳನ್ನು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ನೂತನ ಆವರಣ ಹಿರೇಬಾಗೇವಾಡಿಯಲ್ಲಿ ಇರಿಸಬೇಕಾಗಿರುವ ಕಾರಣ Work to establish a**

		Research wing to temporarily house the equipments of science and other departments purchased under PM-USHA(MERU) in new campus Hirebagewadi(RCUB/2025-26/OW/WORK-INDENT1) ಕಾಮಗಾರಿಗೆ KPPP ಮೂಲಕ ದಿನಾಂಕ: 27.10.2025 ಟೆಂಡರ್ ನ್ನು ಆಹ್ವಾನಿಸಲಾಗಿತ್ತು. ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ Pradeep Shetty (C-WILL ENGINEERS AND ARCHITECTS) ಗುತ್ತಿಗೆದಾರರು ಟೆಂಡರ್‌ಗಿಟ್ಟ ಮೊತ್ತ ರೂ. 42,36,538.5/-ಗಳಿಗೆ ಗುತ್ತಿಗೆ ಮೊತ್ತ ರೂ. 42,28,049.41/-ಗಳಿಗೆ ಅನುಮೋದನೆ ಆಗಿದ್ದು, 0.2% ರಷ್ಟು ಕಡಿಮೆ ದರವನ್ನು ನಮೂದಿಸಿರುತ್ತಾರೆ. ಅದರಂತೆ, ಸದರಿಯವರಿಗೆ ಕಾಮಗಾರಿಯನ್ನು ನಿರ್ವಹಿಸಲು ತಿಳಿಸಲಾಗಿತ್ತು. **ಸದರಿ ಕಾಮಗಾರಿಯು ಅತೀ ತುರ್ತಾಗಿದ್ದರಿಂದ Workslip ನಂತೆ ಕೆಲ ಕಾರ್ಯಗಳನ್ನು ನಿರ್ವಹಿಸಿ, ಕಾಮಗಾರಿಯನ್ನು ಮುಕ್ತಾಯಗೊಳಿಸಲಾಗಿದೆ. ಕಾರಣ, ಸದರಿ ಕಾಮಗಾರಿಗೆ Workslip ನಂತರ ನಿರ್ವಹಿಸಿದ ಕಾಮಗಾರಿಗೆ ಸಭೆಯು ಘಟನೋತ್ತರ ಅನುಮೋದನೆ ನೀಡಿತು.**
04	2026/04/4	Repair work to compound wall and road work of Dr. F. G. Halakatti P.G. Centre, Vijaypura ಕಾಮಗಾರಿಯ ಅವಧಿ ವಿಸ್ತರಣೆ ಮಾಡಿ ಕಾರ್ಯನಿರ್ವಹಿಸುವ ಕುರಿತು.
	ತೀರ್ಮಾನ	**ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಡಾ/ ಫ. ಗು. ಹಳಕಟ್ಟಿ ಸ್ನಾತಕೋತ್ತರ ಕೇಂದ್ರವು ವಿಜಯಪುರದಲ್ಲಿ Repair work to compound wall and road work of Dr. F. G. Halakatti P.G. Centre, Vijayapura ಕಾಮಗಾರಿಯನ್ನು ಕೈಗೊಳ್ಳಲಾಗಿತ್ತು. ಸದರಿ ಕಾಮಗಾರಿಗೆ ದಿನಾಂಕ: 28.05.2025 ರಂದು ಗುತ್ತಿಗೆದಾರರಾದ ಶ್ರೀ ಯಾಕುಬ ಮುದ್ನಾಳ ಇವರಿಗೆ 03 ತಿಂಗಳ ಅವಧಿಗೆ ಕಾರ್ಯಾದೇಶವನ್ನು ನೀಡಲಾಗಿತ್ತು. ಪ್ರಸ್ತುತ, ಸದರಿ ಕಾಮಗಾರಿಯೊಂದಿಗೆ Providing and laying of cement concrete Infornt of entrance Gate and security room of PG Centre at Vijaypura, Construction of entrance Gate and security room of PG Centre at Vijaypura ಕಾಮಗಾರಿಗಳು ಪ್ರಗತಿಯಲ್ಲಿದ್ದುದ್ದರಿಂದ ಹಾಗೂ ಮಳೆಯ ಕಾರಣ Repair work to compound wall and road work of Dr. F. G. Halakatti P. G. Centre, Vijapura ಕಾಮಗಾರಿಯನ್ನು ನಿರ್ವಹಿಸಲು ಗುತ್ತಿಗೆದಾರರಿಗೆ ವಹಿವಾಟು ನಡೆಸಲು ತೊಂದರೆಯಾಗಿದ್ದರಿಂದ, ಸದರಿ ಕಾಮಗಾರಿಯ ಅವಧಿಯನ್ನು ದಿನಾಂಕ: 31.11.2025 ರವರೆಗೆ ವಿಸ್ತರಿಸಿ ಕಾಮಗಾರಿಯನ್ನು ಕೈಗೊಳ್ಳಲು ಸೂಚಿಸಲಾಗಿತ್ತು.** **ಪ್ರಸ್ತುತ ಸದರಿ ಕಾಮಗಾರಿಯು ಮುಕ್ತಾಯಗೊಂಡಿದ್ದು ಸದರಿ ಕಾಮಗಾರಿಗೆ ಅವಧಿ ವಿಸ್ತರಣೆ ಮಾಡಿದ್ದರ ಕುರಿತು ಸಭೆಯು ಘಟನೋತ್ತರ ಅನುಮೋದನೆ ನೀಡಿತು.**
05	2026/04/05	Providing and laying of cement concrete Infront of entrance Gate and security room of PG Centre at Vijayapura ಕಾಮಗಾರಿಯನ್ನು ಕೈಗೊಳ್ಳಲು ಘಟನೋತ್ತರ ಅನುಮೋದನೆ ನೀಡುವ ಕುರಿತು.
	ತೀರ್ಮಾನ	**ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಡಾ/ ಫ. ಗು. ಹಳಕಟ್ಟಿ ಸ್ನಾತಕೋತ್ತರ ಕೇಂದ್ರವು ವಿಜಯಪುರ ಜಿಲ್ಲೆಯ ಮುಖ್ಯ ರಸ್ತೆಯಲ್ಲಿದ್ದು, ಸ್ನಾತಕೋತ್ತರ ಕೇಂದ್ರದ ಪ್ರವೇಶ ದ್ವಾರದ ಮುಂಭಾಗದಲ್ಲಿ ಮಣ್ಣಿನಿಂದ ಕೂಡಿದ್ದು ಧೂಳಿನ ಸಮಸ್ಯೆಯಿಂದಾಗಿ ಮಳೆಗಾಲದಲ್ಲಿ ಕೊಚ್ಚೆಯಾಗುತ್ತಿರುತ್ತದೆ. ಇದರಿಂದ ವಿದ್ಯಾರ್ಥಿಗಳಿಗೆ ಸಿಬ್ಬಂದಿಯವರಿಗೆ ಹಾಗೂ**

<table>
<tr><td></td><td></td><td>ಸಾರ್ವಜನಿಕರಿಗೆ ಓಡಾಡಲು ತೊಂದರೆಯಾಗುತ್ತಿರುತ್ತದೆ. ಕಾರಣ, ಈ ಕುರಿತು Providing and laying of cement concrete Infront of entrance Gate and security room of PG Centre at Vijayapura ಕಾಮಗಾರಿಯನ್ನು ಕೈಗೊಳ್ಳಲು ರೂ. 3,50,000.00/-ಗಳಿಗೆ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಲಾಗಿದೆ.
ಸ್ನಾತಕೋತ್ತರ ಕೇಂದ್ರ, ವಿಜಯಪುರದ ಪ್ರವೇಶದ್ವಾರ ಮತ್ತು ಸೆಕ್ಯೂರಿಟಿ ಕೊಠಡಿಯ ಮುಂಭಾಗದಲ್ಲಿ ಸಿಮೆಂಟ್ ಕ್ರಾಂಕ್ರಿಟ್ ಹಾಕಿಸಬೇಕಾಗಿದ್ದರಿಂದ ಸದರಿ ಕಾಮಗಾರಿಯನ್ನು ರೂ. 3,50,000/-ಗಳ ಅಂದಾಜು ಪಟ್ಟಿಯಂತೆ Providing and laying of cement concrete Infront of entrance Gate and security room of PG Centre at Vijayapura ಕಾಮಗಾರಿಗೆ ಸಭೆಯು ಘಟನೋತ್ತರ ಅನುಮೋದನೆ ನೀಡಿತು ಹಾಗೂ ಕಂಪೌಂಡಗೆ ಸ್ನಾತಕೋತ್ತರ ಕೇಂದ್ರದ ಹೆಸರನ್ನು ಬಣ್ಣದಲ್ಲಿ ಬರೆಯಲು ತೀರ್ಮಾನಿಸಿತು.</td></tr>
<tr><td>06</td><td>2026/04/06</td><td>ಸಿಂಡಿಕೇಟ್ ಸಭೆಯಲ್ಲಿ ಅಧ್ಯಕ್ಷರ ಅಪ್ಪಣೆ ಮೇರೆಗೆ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಭೂತರಾಮನಹಟ್ಟಿಯ ಆವರಣ, ಹಿರೇಬಾಗೇವಾಡಿಯ ನೂತನ ಆವರಣ ಹಾಗೂ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದ ಆವರಣಗಳಲ್ಲಿ ರಾಣಿ ಚನ್ನಮ್ಮನ ಮೂರ್ತಿಯನ್ನು ಸ್ಥಾಪಿಸುವ ಕುರಿತು.</td></tr>
<tr><td></td><td>ತೀರ್ಮಾನ</td><td>ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಭೂತರಾಮನಹಟ್ಟಿಯ ಆವರಣದಲ್ಲಿ, ಹಿರೇಬಾಗೇವಾಡಿಯ ನೂತನ ಆವರಣ ಹಾಗೂ ಬೆಳಗಾವಿ ನಗರದ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದ ಆವರಣಗಳಲ್ಲಿ ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರೊಂದಿಗೆ ಹೋರಾಡಿದ ಪ್ರಥಮ ವೀರಮಹಿಳೆ ರಾಣಿ ಚನ್ನಮ್ಮರವರ ಮೂರ್ತಿಯನ್ನು ಅಂದಾಜು ಮೊತ್ತ ರೂ. 150.00 ಲಕ್ಷಗಳ ವೆಚ್ಚದಲ್ಲಿ ಸ್ಥಾಪಿಸಲು ಹಾಗೂ ಈ ಕುರಿತು DPR ರಚಿಸಲು ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಪಡೆಯಲಾಗಿತ್ತು.
ಸದರಿ ಮೂರ್ತಿಯನ್ನು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಭೂತರಾಮನಹಟ್ಟಿಯ ಆವರಣ, ಹಿರೇಬಾಗೇವಾಡಿಯ ನೂತನ ಆವರಣ ಹಾಗೂ ಬೆಳಗಾವಿ ನಗರದ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದ ಆವರಣಗಳಲ್ಲಿ ಸ್ಥಾಪಸಲು ಅಂದಾಜು ಮೊತ್ತ ರೂ. 3.10 ಕೋಟಿಗಳಾಗುತ್ತದೆ. ವಿವರ ಈ ಕೆಳಗಿನಂತಿರುತ್ತದೆ.
<table>
<tr><th>ಸಂ</th><th>ಸ್ಥಳ</th><th>ಮೂರ್ತಿ ವಿವರ</th></tr>
<tr><td>01</td><td>ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಭೂತರಾಮನಹಟ್ಟಿಯ ಆವರಣ</td><td>15 Feet</td></tr>
<tr><td>02</td><td>ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದ ಆವರಣ-ರಾಯಣ್ಣ ಮೂರ್ತಿಗೆ ಸಮನಾಗಿ ಅಥವಾ ½ ಅಡಿ ಎತ್ತರದ ಮೂರ್ತಿ</td><td>15 Feet</td></tr>
<tr><td>03</td><td>ಹಿರೇಬಾಗೇವಾಡಿಯ ನೂತನ ಆವರಣ</td><td>21 Feet</td></tr>
<tr><td></td><td></td><td>3.10 ಕೋಟಿಗಳು</td></tr>
</table>
ಕಾರಣ, ಅಂದಾಜು ಮೊತ್ತ ರೂ. 3.10 ಕೋಟಿಗಳಿಗೆ ಪರಿಷ್ಕರಿಸಿ ರಾಣಿ ಚನ್ನಮ್ಮರವರ ಮೂರ್ತಿಯನ್ನು ಮೇಲ್ಕಾಣಿಸಿದ ಮೂರು ಆವರಣಗಳಲ್ಲಿ ಸ್ಥಾಪಿಸಲು ಮತ್ತು ಈ ಕುರಿತು DPR ರಚಿಸಲು ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿತು.</td></tr>
<tr><td>07</td><td>2026/04/07</td><td>ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಹಿರೇಬಾಗೇವಾಡಿಯ ಆವರಣದ ಪ್ರವೇಶದ್ವಾರ(ಬೆಂಡಿಗೇರಿ ಮಾರ್ಗ ಮತ್ತು ಎ.ಪಿ.ಎಂ.ಸಿ ಮಾರ್ಗ)ಕ್ಕೆ ಕಮಾನು ನಿರ್ಮಿಸುವ ಕುರಿತು</td></tr>
</table>

	ತೀರ್ಮಾನ	ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಹಿರೇಬಾಗೇವಾಡಿಯ ಆವರಣದ ಪ್ರವೇಶದ್ವಾರದಲ್ಲಿ ಅತ್ಯುನ್ನತ ದರ್ಜೆಯ ವಿನ್ಯಾಸದ ಕಮಾನು(Arch) (ಬೆಂಡಿಗೇರಿ ಮಾರ್ಗ ಮತ್ತು ಎ.ಪಿ.ಎಂ.ಸಿ ಮಾರ್ಗ) ನಿರ್ಮಿಸಲು ವಿವಿಧ ಮಾದರಿಗಳ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ಒಟ್ಟು ಅಗತ್ಯವಿರುವ ನಿಯಮಿತ ಸಂಖ್ಯೆಯಲ್ಲಿ ಕಮಾನುಗಳನ್ನು ನಿರ್ಮಿಸಲು ಹಾಗೂ ನಿಗದಿಪಡಿಸಿದ ಮೊತ್ತದ ಅಂದಾಜಿನಂತೆ, ಅಂದಾಜು ಪಟ್ಟಿ ತಯಾರಿಸಿಕೊಂಡು ಕೆ.ಟಿ.ಪಿ.ಪಿ. ಅನ್ವಯ ನಿಯಮಾನುಸಾರ ಎಲ್ಲ ಅಗತ್ಯ ಕ್ರಮ ಜರುಗಿಸಿ, ನಂತರ ಸಿಂಡಿಕೇಟ್‌ಗೆ ಸದರಿ ವಿಷಯದ ವಿವರ ಮಾಹಿತಿಯನ್ನು ಒದಗಿಸಲು ಸಭೆಯು ಅನುಮೋದನೆ ನೀಡಿತು.
08	2026/04/08	ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಹಿರೇಬಾಗೇವಾಡಿಯ ಆವರಣದಲ್ಲಿನ ಪ್ರವೇಶದ್ವಾರಕ್ಕೆ ಸಾಮಾನ್ಯ ರೀತಿಯಲ್ಲಿ ಕಮಾನು(Arch) ನಿರ್ಮಿಸುವ ಕುರಿತು
	ತೀರ್ಮಾನ	ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಹಿರೇಬಾಗೇವಾಡಿಯ ಆವರಣದಲ್ಲಿನ ಮುಖ್ಯ ಪ್ರವೇಶದ್ವಾರಕ್ಕೆ ಸಾಮಾನ್ಯ (Regular) ರೀತಿಯಲ್ಲಿ ಕಮಾನು(Arch) ನಿರ್ಮಿಸಲು ಸಂಬಂಧಪಟ್ಟವರಿಂದ ವಿವಿಧ ಮಾದರಿಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ನಿಗದಿಪಡಿಸಿದ ಮೊತ್ತದ ಅಂದಾಜಿನಂತೆ, ಅಂದಾಜು ಪತ್ರಿಕೆ ತಯಾರಿಸಿಕೊಂಡು ಕೆ.ಟಿ.ಪಿ.ಪಿ. ಅನ್ವಯ ನಿಯಮಾನುಸಾರ ಎಲ್ಲ ಅಗತ್ಯ ಕ್ರಮ ಜರುಗಿಸಿ, ನಂತರ ಸಿಂಡಿಕೇಟ್‌ಗೆ ಸದರಿ ವಿಷಯದ ವಿವರ ಮಾಹಿತಿಯನ್ನು ಒದಗಿಸಲು ಸಭೆಯು ಅನುಮೋದನೆ ನೀಡಿತು.
09	2026/04/09	Construction of Compound Wall For Rani Channamma University at Hirebagewadi New Campus Belagavi ಕಾಮಗಾರಿಗೆ ಸಂಬಂಧಿಸಿದಂತೆ EIRL ಹಾಗೂ WorkSlip ನಂತೆ ಬಿಲ್ ಪಾವತಿಸಿ ಕಾಮಗಾರಿಯನ್ನು ಮುಕ್ತಾಯಗೊಳಿಸುವ ಕುರಿತು.
	ತೀರ್ಮಾನ	ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ನೂತನ ಅವರಣ, ಹಿರೇಬಾಗೇವಾಡಿಯಲ್ಲಿ Construction of Compound Wall for Rani Channamma University at Hirebagewadi New Campus Belagavi ಕಾಮಗಾರಿಗೆ ಟೆಂಡರ್‌ನ್ನು 2021ರಲ್ಲಿ ಆಹ್ವಾನಿಸಿ, M/s. Dev Engineers, Mumbai ಇವರಿಗೆ ಗುತ್ತಿಗೆಯನ್ನು ನೀಡಲಾಗಿತ್ತು. ಆದರೆ, ಸ್ಥಳೀಯ ರೈತರ ತಕರಾರಿನಿಂದ, ಮಳೆಯ ಕಾರಣ ಕಾಮಗಾರಿಯು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸಲು ಗುತ್ತಿಗೆದಾರರಿಂದ ಸಾಧ್ಯವಾಗದ ಕಾರಣ, ಸದರಿ ಕಾಮಗಾರಿಯನ್ನು ಯಥಾಸ್ಥಿತಿಯಲ್ಲಿ ಮುಕ್ತಾಯಗೊಳಿಸಲು ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಪಡೆದುಕೊಳ್ಳಲಾಗಿತ್ತು. ಅದರಂತೆ, ಸದರಿ ಕಾಮಗಾರಿಯಲ್ಲಿನ Rectification ಗಳ ಕಾರ್ಯವನ್ನು ವಿಶ್ವವಿದ್ಯಾಲಯದ ಕಟ್ಟಡ ವಿಭಾಗದಿಂದ ನಿರ್ವಹಿಸಲಾಗಿದ್ದು, ಪ್ರಸ್ತುತವರೆಗೆ 3.5 ಕಿ.ಮೀ ಉದ್ದದ ಆವರಣ ಗೋಡೆಯ ಕಾಮಗಾರಿಯು ಪೂರ್ಣಗೊಂಡಿದ್ದು, 3.5 ಕಿ.ಮೀ ಗೆ ಅಂತಿಮಗೊಳಿಸಿ ಕಾಮಗಾರಿಯ EIRL & Workslip ನಂತೆ ಸದರಿ ಕಾಮಗಾರಿಯ ಮೊತ್ತವನ್ನು ಪಾವತಿಸಿ, ಯಥಾಸ್ಥಿತಿಯಲ್ಲಿ ಕಾಮಗಾರಿಯನ್ನು ಮುಕ್ತಾಯಗೊಳಿಸಲು ಸಿಂಡಿಕೇಟ್ ಸಭೆಗೆ ವಿಷಯವನ್ನು ಮಂಡಿಸಲಾಯಿತು. ಸದರಿ ಕಾಮಗಾರಿಯು ಕಳಪೆ ಗುಣಮಟ್ಟದ್ದಾಗಿರುವ ದೂರುಗಳಿದ್ದು ಕಾಮಗಾರಿ ಮೊತ್ತವನ್ನು ಸಂದಾಯ ಮಾಡುವ ವಿಷಯವನ್ನು ತಡೆಹಿಡಿಯಲು ಡಾ. ಮಹಾಂತೇಶ ಕಂಬಾರ ಇವರು ಸಲಹೆ ನೀಡಿದರು. ಚರ್ಚಿಸಿದ ಸಭೆಯು, ಈ ವಿಷಯವನ್ನು ಕಾಯ್ದಿರಿಸಲು ತೀರ್ಮಾನಿಸಿತು.

10	2026/04/10	ದಿನಾಂಕ: 09.02.2026ರಂದು ನಡೆದ ಸಾಮಾನ್ಯ ಸಿಂಡಿಕೇಟ್ ಸಭೆಯ ತೀರ್ಮಾನಂತೆ ಆರ್‌ಸಿಯು-ಫೇಸ್ಮಾ ಕಂಪನಿಯ ಬೈಲಾಗಳನ್ನು ಮಂಡಿಸುವ ಕುರಿತು.
	ತೀರ್ಮಾನ	**ಆರ್‌ಸಿಯು-ಫೇಸ್ಮಾ ಕಂಪನಿಯ ಜಾರಿ, ನಿಯಮಾವಳಿಗಳು, ನೇಮಕಾತಿ ಮತ್ತು ಆರ್ಥಿಕ ವಿಷಯಗಳ ಮಾಹಿತಿಯನ್ನು ಸಭೆಗೆ ಮಂಡಿಸಲಾಯಿತು.** **ಶ್ರೀ ವಿನೀತ ಜೋಶಿ ಮತ್ತು ಶ್ರೀ ಈರಣ್ಣ ಹಪ್ಪಲಿ ಇವರುಗಳ ಮನವಿ:** **1. ಆರ್‌ಸಿಯು-ಫೇಸ್ಮಾ ಕಂಪನಿ ಸ್ಥಾಪನೆಯಾದ ನಂತರ, ಸಿಂಡಿಕೇಟ್‌ನ್ನು ಅದರ ಆಡಳಿತ, ಮೇಲ್ವಿಚಾರಣೆ ಅಥವಾ ನಿಯಂತ್ರಣದಿಂದ ಯಾವುದೇ ಅರ್ಥಪೂರ್ಣ ಪಾತ್ರದಿಂದ ದೂರ ಮಾಡಲಾಗುತ್ತದೆಯೇ?** **2. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2020ರ ನಿಯಮ ಸೆಕ್ಷನ್ 29(2) ಪ್ರಕಾರ ಸಿಂಡಿಕೇಟ್‌ಗೆ ವಿಶ್ವವಿದ್ಯಾಲಯದ ಹಣಕಾಸು ಮತ್ತು ಆಡಳಿತಾತ್ಮಕ ವ್ಯವಹಾರಗಳನ್ನು ನಿರ್ವಹಿಸುವ ಮತ್ತು ನಿಯಂತ್ರಿಸುವ ಅಧಿಕಾರ ನೀಡಲಾಗಿದೆ. ವಿಶ್ವವಿದ್ಯಾಲಯದ ಆಸ್ತಿಯನ್ನು ಸ್ವೀಕರಿಸುವುದು, ಕಾಯ್ದುಕೊಳ್ಳುವುದು, ನಿಯಂತ್ರಿಸುವುದು ಮತ್ತು ಆಡಳಿತ ನಡೆಸುವುದು ಹಾಗೂ ಸೂಕ್ತ ಹಣಕಾಸು ಹೂಡಿಕೆಯನ್ನು ಖಚಿತಪಡಿಸುವ ಅಧಿಕಾರವೂ ಇದೆ. ಈ ಹಿನ್ನೆಲೆಯಲ್ಲಿ, ವಿಶ್ವವಿದ್ಯಾಲಯದ ಸಂಪನ್ಮೂಲಗಳನ್ನು ಬಳಸಿಕೊಂಡು ಕಂಪನಿಯನ್ನು ಸ್ಥಾಪಿಸುವುದಾದರೂ, ಅದು ಸಿಂಡಿಕೇಟ್ ಮೇಲ್ವಿಚಾರಣೆ ಇಲ್ಲದೆ ಸ್ವತಂತ್ರವಾಗಿ ಕಾರ್ಯನಿರ್ವಹಿಸುವ ಪ್ರಸ್ತಾವಿತ ವ್ಯವಸ್ಥೆ, ಸಿಂಡಿಕೇಟ್‌ನ ಕಾನೂನುಬದ್ಧ ಕರ್ತವ್ಯಗಳಿಗೆ ವಿರುದ್ಧವಾಗಿರುವಂತೆ ಕಾಣುತ್ತದೆ.** **3. ಕಂಪನಿ ವಿಶ್ವವಿದ್ಯಾಲಯದ ಬೌದ್ಧಿಕ ಮತ್ತು ಮೂಲಸೌಕರ್ಯ ಸಂಪನ್ಮೂಲಗಳನ್ನು ಬಳಸಲು ಉದ್ದೇಶಿಸಿದೆ.** **4. ವಿಶ್ವವಿದ್ಯಾಲಯವು ಕಂಪನಿಯನ್ನು ಸ್ಥಾಪಿಸಲು ಮುಂದಾದಲ್ಲಿ, ಕೆಳಗಿನ ನಿಯಮಗಳನ್ನು ಸಂವಿಧಾನ ಪತ್ರಿಕೆ ಮತ್ತು ನಿಯಮಾವಳಿಗಳಲ್ಲಿ ಸ್ಪಷ್ಟವಾಗಿ ಸೇರಿಸಬೇಕು.** • **ಕಡ್ಡಾಯವಾಗಿ ಸರ್ಕಾರದಿಂದ ನಾಮನಿರ್ದೇಶನಗೊಂಡ ಮೂರು ಸಿಂಡಿಕೇಟ್ ಸದಸ್ಯರನ್ನು ಕಂಪನಿಯ Board of Directors ಆಗಿ ನೇಮಿಸುವುದು.** • **ಕಂಪನಿಯ ಹಣಕಾಸು, ಆಡಳಿತಾತ್ಮಕ ಮತ್ತು ಕಾರ್ಯಕ್ರಮ ಸಂಬಂಧಿಸಿದ ವರದಿಗಳನ್ನು ನಿಯಮಿತವಾಗಿ ಸಿಂಡಿಕೇಟ್‌ಗೆ ಸಲ್ಲಿಸಬೇಕು.** • **ಸಂವಿಧಾನ ತಿದ್ದುಪಡಿ, ದೊಡ್ಡ ಹಣಕಾಸು ನಿರ್ಧಾರಗಳು ಮತ್ತು ತಂತ್ರಜ್ಞಾನದ ಬದಲಾವಣೆಗಳಿಗೆ ಸಿಂಡಿಕೇಟ್ ಪೂರ್ವಾನುಮೋದನೆ ಅಗತ್ಯ.** • **ವಿಶ್ವವಿದ್ಯಾಲಯದ ಉದ್ದೇಶಗಳೊಂದಿಗೆ ಕಂಪನಿಯ ಚಟುವಟಿಕೆಗಳು ಶಿಕ್ಷಣ, ಸಂಶೋಧನೆ ಮತ್ತು ಸಾರ್ವಜನಿಕ ಸೇವೆಯು ವಿಶ್ವವಿದ್ಯಾಲಯದ ಧ್ಯೇಯದೊಂದಿಗೆ ಹೊಂದಾಣಿಕೆಯಾಗಿರಬೇಕು.** • **ಕಂಪನಿ ಮತ್ತು ವಿಶ್ವವಿದ್ಯಾಲಯದ ನಡುವಿನ ವಿವಾದಗಳನ್ನು ಪರಿಹರಿಸಲು ಸಿಂಡಿಕೇಟ್ ಅಧೀನದಲ್ಲಿ ವ್ಯವಸ್ಥೆ ಇರಬೇಕು.** • **ಸಿಂಡಿಕೇಟ್, ಕಂಪನಿಯ ಕಾರ್ಯಕ್ಷಮತೆ ಮತ್ತು ಆಡಳಿತ ವ್ಯವಸ್ಥೆಯನ್ನು ನಿಯಮಿತವಾಗಿ ಪರಿಶೀಲಿಸಬೇಕು.** • **ರಚನಾತ್ಮಕ ಬದಲಾವಣೆಗಳ ಮೇಲಿನ ನಿಯಂತ್ರಣ**

		ಕಂಪನಿಯ ತಿದ್ದುಪಡಿ, ವಿಲೀನ ಅಥವಾ ವಿಸರ್ಜನೆಗೆ ಸಂಬಂಧಿಸಿದ ಯಾವುದೇ ಪ್ರಸ್ತಾವನೆಗೆ ಸಿಂಡಿಕೇಟ್ ಅನುಮೋದನೆ ಅಗತ್ಯವಿರುತ್ತದೆ. **ಡಾ. ಕಾವೇರಿ.ಎಚ್.ಎಂ (ವರ್ಚುವಲ್ ಮೂಲಕ):-** **ಸೆಕ್ಷನ್ 8 ಕಂಪನಿಯಲ್ಲಿ ಸಿಂಡಿಕೇಟ್ ಸದಸ್ಯರುಗಳ ಪಾತ್ರ ಮತ್ತು ಅಧಿಕಾರ ವ್ಯಾಪ್ತಿ ಬಗ್ಗೆ ಮಾಹಿತಿ ನೀಡುವುದು. ಈ ವಿಷಯಕ್ಕೆ ಸಂಬಂಧಿಸಿ ಕೆಲವು ಆಕ್ಷೇಪಣೆಗಳಿದ್ದು ಲಿಖಿತ ರೂಪದಲ್ಲಿ ಮನವಿ ಸಲ್ಲಿಸಲಾಗುವುದು.** **ಕುಲಸಚಿವರು:-** **1. ಆರ್‌ಸಿಯು-ಫೇಸ್ಮಾ ಕಂಪನಿಯ Board of Directors ನಲ್ಲಿ ಸರ್ಕಾರದಿಂದ ನಾಮನಿರ್ದೇಶನಗೊಂಡ ಮೂರು ಸಿಂಡಿಕೇಟ್ ಸದಸ್ಯರನ್ನು ಒಳಪಡಿಸಲು ಕಂಪನಿಯ ಕಾಯ್ದೆಯನ್ನು ಪರಿಶೀಸಲಾಗುವುದು ಪ್ರಸ್ತುತ ಜಾರಿಯಲ್ಲಿರುವ Board of Directors ಜೊತೆ ಚರ್ಚಿಸಲಾಗುವುದು ಎಂದರು** **2. ಸದರಿ ಕಂಪನಿಯಿಂದಾಗಿ ವಿಶ್ವವಿದ್ಯಾಲಯದ ಸಿಂಡಿಕೇಟ್ ಪ್ರಾಧಿಕಾರದ ಅಧಿಕಾರದಲ್ಲಿ ಯಾವುದೇ ಧಕ್ಕೆಯಾಗುವುದಿಲ್ಲ.** **3. ಆರ್‌ಸಿಯು-ಫೇಸ್ಮಾ ಕಂಪನಿಯ ಪ್ರಗತಿಯ ಕುರಿತಾಗಿ ತ್ರೈಮಾಸಿಕ ವರದಿಯನ್ನು(Quaterly Report) ಸಿಂಡಿಕೇಟ್ ಸಭೆಯ ಗಮನಕ್ಕೆ ತರುವುದಾಗಿ ತಿಳಿಸಿದರು.** **4. ಸದಸ್ಯರು ತಿಳಿಸಿರುವ ಮೇಲ್ಕಂಡ ಎಲ್ಲ ಅಂಶಗಳನ್ನು ಗಮನಿಸಲಾಗುವುದು, ಕಾನೂನು ಅಭಿಪ್ರಾಯ ಪಡೆದು ನಂತರ ಕ್ರಮ ವಹಿಸುವುದಾಗಿ ತಿಳಿಸಿದರು.**
11	2026/04/11	ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಆವರಣದಲ್ಲಿರುವ ರಸ್ತೆಗಳಿಗೆ ಮತ್ತು ಸಭಾಂಗಣಗಳಿಗೆ ಕನ್ನಡದ ಖ್ಯಾತ ಸಾಹಿತಿಗಳು, ನದಿಗಳು ಕಲಾ ಪ್ರಕಾರಗಳ, ಸ್ವಾತಂತ್ರ್ಯ ಹೋರಾಟಗಾರರ ಹೆಸರು ಸೂಚಿಸುವ ಕುರಿತು.
	ತೀರ್ಮಾನ	**ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಆವರಣದಲ್ಲಿರುವ ರಸ್ತೆಗಳಿಗೆ ಮತ್ತು ಸಭಾಂಗಣಗಳಿಗೆ ಕನ್ನಡದ ಖ್ಯಾತ ಸಾಹಿತಿಗಳು, ನದಿಗಳು ಕಲಾ ಪ್ರಕಾರಗಳ, ಸ್ವಾತಂತ್ರ್ಯ ಹೋರಾಟಗಾರರ ಹೆಸರು ಸೂಚಿಸುವ ವಿಷಯದ ಕುರಿತು ಚರ್ಚಿಸಿದ ಸಭೆಯು, ಎಲ್ಲ ಸದಸ್ಯರುಗಳು ಡಾ. ಮಹಾಂತೇಶ ಕಂಬಾರ ಇವರಿಗೆ ಹೆಸರುಗಳನ್ನು ಸಲ್ಲಿಸಲು ಸಭೆಯು ತೀರ್ಮಾನಿಸಿತು.**
12	2026/04/12	2025-26ನೇ ಸಾಲಿನ ಹಣಕಾಸು ಸಮಿತಿ ಸಭೆಯ ನಡಾವಳಿಗಳಿಗೆ ಅನುಮೋದನೆ ನೀಡುವ ಕುರಿತು
	ತೀರ್ಮಾನ	**ವಿಶೇಷ ಆಹ್ವಾನಿತರಾಗಿ ಆಗಮಿಸಿದ ಹಣಕಾಸು ಅಧಿಕಾರಿಗಳು ಶ್ರೀಮತಿ ಎಂ.ಎ. ಸಪ್ನ ಇವರು ದಿನಾಂಕ: 30.12.2025 ರಂದು ಜರುಗಿದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 2025-26ನೇ ಸಾಲಿನ 3ನೇ ಹಣಕಾಸು ಸಮಿತಿ ಸಭೆಯ ನಡಾವಳಿ ಹಾಗೂ ದಿನಾಂಕ: 18.03.2026 ರಂದು ಜರುಗಿದ 4ನೇ ಹಣಕಾಸು ಸಮಿತಿ ಸಭೆಯ ನಡಾವಳಿಯನ್ನು ಸಭೆಗೆ ವಿಸ್ತಾರವಾಗಿ ವಿವರಿಸಿದರು ಹಾಗೂ ಹಿಂದಿನ ಸಭೆ ದಿನಾಂಕ: 04.12.2025 ರಂದು ಗೌರವಾನ್ವಿತ ಸಿಂಡಿಕೇಟ್ ಸದಸ್ಯರು ತಿಳಿಸಿದಂತೆ ನಾನು ಅನಧೀಕೃತ ವ್ಯಕ್ತಿಯಾಗಿರುವುದಿಲ್ಲ(Unauthorised Person) ಸರ್ಕಾರದಿಂದ ನಿಯೋಜನೆಗೊಂಡ ಶಾಸನಬದ್ಧ ಅಧಿಕಾರಿಯಾಗಿದ್ದು ಮಾನ್ಯ ಕುಲಪತಿಗಳ ನಿರ್ದೇಶನದ ಮೇರೆಗೆ ಸಭೆಗೆ ಹಾಜರಾಗಿರುವುದಾಗಿ ಸ್ಪಷ್ಟಪಡಿಸಿದರು.** **ಪರಿಶೀಲಿಸಿದ ಸಭೆಯು, ದಿನಾಂಕ: 30.12.2025 ರಂದು ಜರುಗಿದ ರಾಣಿ ಚನ್ನಮ್ಮ**

		ವಿಶ್ವವಿದ್ಯಾಲಯದ 2025-26ನೇ ಸಾಲಿನ 3ನೇ ಹಣಕಾಸು ಸಮಿತಿ ಸಭೆಯ ನಡಾವಳಿಯನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು. ಮುಂದುವರೆದು, ದಿನಾಂಕ: 18.03.2026 ರಂದು ಜರುಗಿದ 4ನೇ ಹಣಕಾಸು ಸಮಿತಿ ಸಭೆಯ ನಡಾವಳಿಯ ಕಾರ್ಯಸೂಚಿ ಸಂಖ್ಯೆ 4 ರಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಯುಜಿಸಿ ವೇತನ ಶ್ರೇಣಿ ಪಡೆಯುತ್ತಿರುವ ಎಲ್ಲಾ ಬೋಧಕ ಸಿಬ್ಬಂದಿಗಳು ಪದೋನ್ನತಿ ಹೊಂದಿ ಅರ್ಹತೆ ಪಡೆದ ದಿನಾಂಕದಿಂದ ಆದೇಶ ಹೊರಡಿಸಿದ ದಿನಾಂಕದವರೆಗೆ ಆರ್ಥಿಕ ಸೌಲಭ್ಯವನ್ನು ಸಂದಾಯ ಮಾಡಲಾದ ಹಣಕಾಸಿನ ಸೌಲಭ್ಯವನ್ನು ವಸೂಲಾತಿ ಕುರಿತಂತೆ ಸಭೆಯಲ್ಲಿ ಚರ್ಚಿಸಲಾಯಿತು. ಡಾ. ಮಹಾಂತೇಶ ಕಂಬಾರ: ಆರ್ಥಿಕ ಸೌಲಭ್ಯ ಕುರಿತಾಗಿ ಈ ಹಿಂದೆ ಸಭೆಯ ಗಮನಕ್ಕೆ ತಂದಿರುತ್ತೇನೆ. ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿಗಳಿಗೆ ಕಾಲಕ್ರಮೇಣ ಅರ್ಹತೆ ದಿನಾಂಕಕ್ಕೆ ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ಸಿ.ಎ.ಎಸ್ ಪದೋನ್ನತಿ ಆದೇಶ ನೀಡುವಂತೆ ಕ್ರಮ ವಹಿಸುವುದು. ಪ್ರತಿಕ್ರಿಯಿಸಿದ ಕುಲಪತಿಗಳು, ಸಿಂಡಿಕೇಟ್ ಅನುಮೋದನೆಯನ್ನು ಕಾಯ್ದಿರಿಸಿ ಪದೋನ್ನತಿ ನೀಡಲು ನಿಯಮಾವಳಿಗಳಲ್ಲಿ ಅವಕಾಶವಿರುವುದಿಲ್ಲ. ಒಂದು ವೇಳೆ ನೀಡಿದ್ದಲ್ಲಿ ಗೊಂದಲಗಳು ಸೃಷ್ಟಿಸಬಹುದು ಎಂದರು. ಪ್ರೊ. ಡಿ. ಎನ್. ಪಾಟೀಲ್: 2012 ರಿಂದ ಅರ್ಹತಾ ದಿನಾಂಕಕ್ಕೆ ಅನ್ವಯವಾಗುವಂತೆ ಹಣಕಾಸಿ ಸೌಲಭ್ಯವನ್ನು ಪಡೆಯುತ್ತಿದ್ದು, ಈ ಕುರಿತಂತೆ ಲೆಕ್ಕಪರಿಶೋಧನೆ ಆಕ್ಷೇಪಣೆ ಆಗಿರುವುದಿಲ್ಲ ಹಾಗೂ ಸರ್ಕಾರದಿಂದ ಆದೇಶ ಕೂಡ ಬಂದಿರುವುದಿಲ್ಲ. ಸರ್ಕಾರದಿಂದ ವೇತನ ಅನುದಾನ(Salary Grant) ಬಂದಿರುತ್ತದೆ ಹಾಗೂ ಆದಾಯಕ್ಕೆ ತಕ್ಕಂತೆ ತೆರಿಗೆ ಕೂಡ ಈಗಾಗಲೇ ಭರಿಸಲಾಗಿದೆ. ಕಾರಣ, ಮತ್ತೊಮ್ಮೆ ಪರಿಶೀಲಿಸಲು ಕೋರಿದರು. ಹಣಕಾಸು ಅಧಿಕಾರಿಗಳು: ಲೆಕ್ಕಪರಿಶೋಧನೆ ಆಕ್ಷೇಪಣೆ ಬಂದಿರುತ್ತದೆ ಹಾಗೂ 2022 ರಲ್ಲಿ ಸರ್ಕಾರವು ಆದೇಶ ಹೊರಡಿಸಿರುತ್ತದೆ. ಕರ್ನಾಟಕ ವಿಶ್ವವಿದ್ಯಾಲಯ ಮತ್ತು ರಾಣಿ ಚನ್ನಮ್ಮ ವಿಶ್ವವಿದ್ಯಾಲಯಗಳನ್ನು ಹೊರತುಪಡಿಸಿ ರಾಜ್ಯದ ಬೇರೆ ಎಲ್ಲ ವಿಶ್ವವಿದ್ಯಾಲಯಗಳು ಇದೇ ನಿಯಮವನ್ನು ಪಾಲಿಸುತ್ತವೆ ಮತ್ತು ಸರ್ಕಾರದ ಕಾರ್ಯದರ್ಶಿಗಳನ್ನು ಒಳಗೊಂಡ "ಹಣಕಾಸು ಸಮಿತಿ" ಸಭೆಯಲ್ಲಿ ವಸೂಲಾತಿ ಕುರಿತು ಅನುಮೋದನೆಗೊಂಡಿರುತ್ತದೆ. ಚರ್ಚಿಸಿದ ಸಭೆಯು, ಈಗಾಗಲೇ ಸರ್ಕಾರಕ್ಕೆ ಮಾರ್ಗದರ್ಶನ ಕೋರಿ ಪತ್ರ ಬರೆಯಲಾಗಿದೆ. ಕಾರಣ, ಸರಕಾರದಿಂದ ನಿರ್ದೇಶನ ಬಂದ ನಂತರ ಸೂಕ್ತ ಕ್ರಮ ಕೈಗೊಳ್ಳಲು ಸಭೆಯು ಸೂಚಿಸಿತು ಹಾಗೂ ಭವಿಷ್ಯದಲ್ಲಿ ಸಿ.ಎ.ಎಸ್. ಪದೋನ್ನತಿ ಆದೇಶ ಹೊರಡಿಸಿದ ದಿನಾಂಕದಿಂದ ಬೋಧಕ ಸಿಬ್ಬಂದಿಗಳಿಗೆ ಆರ್ಥಿಕ ಸೌಲಭ್ಯವನ್ನು ಮಂಜೂರು ಮಾಡಲು ತೀರ್ಮಾನಿಸಿತು. ತದನಂತರ, 18.03.2026 ರಂದು ಜರುಗಿದ 4ನೇ ಹಣಕಾಸು ಸಮಿತಿ ಸಭೆಯ ನಡಾವಳಿಗೆ ಅನುಮೋದನೆ ನೀಡಿತು.
13	2026/04/13	2025-26ನೇ ಸಾಲಿನ ಪರಿಷ್ಕೃತ ಆಯವ್ಯಯ ಮತ್ತು 2026-27ನೇ ಸಾಲಿನ ಅಂದಾಜು ಬಜೆಟ್‌ನ್ನು ಅನುಮೋದನೆ ನೀಡುವ ಕುರಿತು

	ತೀರ್ಮಾನ	ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 2025-26ನೇ ಸಾಲಿನ ಪರಿಷ್ಕೃತ ಆಯವ್ಯಯ ಮತ್ತು 2026-27ನೇ ಸಾಲಿನ ಅಂದಾಜು ಬಜೆಟ್‌ಗೆ ಸಭೆಯು ಅನುಮೋದನೆ ನೀಡಿತು. ಸದಸ್ಯರಾದ ಡಾ. ಮಹಾಂತೇಶ ಕಂಬಾರ ಇವರು ವಿಶ್ವವಿದ್ಯಾಲಯದಲ್ಲಿ ಆರ್ಥಿಕ ಶಿಸ್ತು ಕಾಪಾಡಿ ಹಣಕಾಸು ಸ್ಥಿತಿಯನ್ನು ವ್ಯವಸ್ಥಿತವಾಗಿ ನಿರ್ವಹಿಸಿರುವುದಕ್ಕೆ ವಿಶೇಷವಾಗಿ ಕಾರ್ಪಸ್ ಫಂಡ್ ನಿರ್ವಹಣೆ ಕುರಿತಾಗಿ ಮೆಚ್ಚುಗಿ ವ್ಯಕ್ತಪಡಿಸಿ ಮಾನ್ಯ ಕುಲಪತಿಗಳು, ಕುಲಸಚಿವರು ಹಾಗೂ ಹಣಕಾಸು ಅಧಿಕಾರಿಗಳಿಗೆ ಅಭಿನಂದನೆ ಸಲ್ಲಿಸಿದರು.
14	2026/04/14	ಅಂಕಪಟ್ಟಿಗಳು ಹಾಗೂ ಪದವಿ ಪ್ರಮಾಣ ಪತ್ರಗಳಿಗೆ ಸಂಬಂಧಿಸಿದ ದೂರಿನ ಬಗ್ಗೆ
	ತೀರ್ಮಾನ	ಅಂಕಪಟ್ಟಿಗಳು ಹಾಗೂ ಪದವಿ ಪ್ರಮಾಣ ಪತ್ರಗಳನ್ನು ಮುದ್ರಿಸುವ ಟೆಂಡರ್ ಕಾಮಗಾರಿಯಲ್ಲಿ ಅಕ್ರಮ ಜರುಗಿದೆ ಎಂದು ಲೋಕಾಯುಕ್ತರಿಗೆ ದೂರು ಸಲ್ಲಿಸಿರುವುದರಿಂದ ಹಾಗೂ ಪತ್ರಿಕೆಗಳಲ್ಲಿ ಪ್ರಕಟವಾಗಿರುವುದರಿಂದ ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಶೇಷ ಆಹ್ವಾನಿತರಾಗಿ ಆಗಮಿಸಿದ ನಿಕಟಪೂರ್ವ ಮೌಲ್ಯಮಾಪನ ಕುಲಸಚಿವರಾದ ಪ್ರೊ. ರವೀಂದ್ರ ಕದಂ ಇವರು ಈ ಕೆಳಕಾಣಿಸಿದ ವಿವರಣೆ ನೀಡಿದರು. ಸರಕಾರವು ಕೋವಿಡ್‌ನಿಂದಾಗಿ ಅಂಕ ಪಟ್ಟಿ ಮತ್ತು ಪದವಿ ಪ್ರಮಾಣಗಳನ್ನು ಮುದ್ರಿಸುವ ಬದಲಾಗಿ ಡಿಜಿಲಾಕರ್‌ನಲ್ಲಿ ಅಳವಡಿಸಲು ತಿಳಿಸಿರುತ್ತಾರೆ. ಘನತೆವೆತ್ತ ರಾಜ್ಯಪಾಲರ ಪತ್ರದಲ್ಲಿ MSIL ದಿಂದ ಅಂಕ ಪಟ್ಟಿ ಮತ್ತು ಪದವಿ ಪ್ರಮಾಣಗಳನ್ನು ಖರೀದಿಸಿ ವಿತರಿಸಲು ಸೂಚಿಸಿತ್ತಾರೆ. ಅದರಂತೆ ಸದರಿ ವಿಷಯವನ್ನು ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಲಾಗಿದ್ದು MSIL ದಿಂದ ಖರೀದಿಸಲು ಸಭೆಯು ಅನುಮತಿ ನೀಡಿರುತ್ತದೆ. ಸರ್ಕಾರದಿಂದ ಮತ್ತೊಮ್ಮೆ ಸುತ್ತೋಲೆ ಬಂದಿದ್ದು MSIL ದಿಂದ ಖರೀದಿಸಬಾರದೆಂದು ತಿಳಿಸಿರುತ್ತಾರೆ. ಈ ಗೊಂದಲದ ಸನ್ನಿವೇಶದಲ್ಲಿ ಸಿಂಡಿಕೇಟ್ ಸಭೆಗೆ ವಿಷಯವನ್ನು ಮತ್ತೊಮ್ಮೆ ಮಂಡಿಸಲಾಯಿತು. ಸಿಂಡಿಕೇಟ್ ಸಭೆಯು MSIL ದಿಂದ ಖರೀದಿಸುವುದು ದುಬಾರಿಯಾಗಿರುವುದರಿಂದ GeM ನಲ್ಲಿ ಟೆಂಡರ್ ಆಹ್ವಾನಿಸಿ ಖರೀದಿಸಲು ಸೂಚಿಸಿರುತ್ತಾರೆ. ಅದರಂತೆ GeM ನಲ್ಲಿ ಟೆಂಡರ ಕೂಡ ಆಹ್ವಾನಿಸಲಾಗಿತ್ತು. All over India ಗುತ್ತಿಗೆದಾರರು ಭಾಗವಹಿಸಲೆಂದು GeM ನಲ್ಲಿ ಟೆಂಡರ್ ಆಹ್ವಾನಿಸಲಾಗಿತ್ತು. ಮೊದಲನೇ ಬಾರಿಗೆ ಟೆಂಡರ್ ಆಹ್ವಾನಿಸಿದಾಗ, ಟೆಂಡರ್ ಮೊತ್ತ ರೂ. 7.18 ಕೋಟಿಯಾಗಿದ್ದು ವಿಷಯ ನಿರ್ವಾಹಕರ ಟೈಪಿಂಗ್ ತಪ್ಪಿನಿಂದಾಗಿ ರೂ. 5.18 ಕೋಟಿ ಹಾಗೂ No of Pages ಜಾಗದಲ್ಲಿ Quantity ಎಂದು ನಮೂದಿಸಿ ಟೆಂಡರ್ ಆಹ್ವಾನಿಸಲಾಗಿತ್ತು. ಸದರಿ ಲೋಪದೋಷ ತಮ್ಮ ಗಮನಕ್ಕೆ ಬಂದ ನಂತರ ಟೆಂಡರ್‌ನ್ನು ಹಿಂಪಡೆಯಲಾಯಿತು. ತದನಂತರ ಎಲ್ಲವನ್ನು ಸರಿಪಡಿಸಿ ನಿಯಮಾನುಸಾರ ಮತ್ತೊಮ್ಮೆ ಟೆಂಡರ್ ಆಹ್ವಾನಿಸಲಾಗಿತ್ತು. ಈ ಹಿಂದೆ ಡಿಜಿಲಾಕರ್‌ನಲ್ಲಿ ವಿತರಿಸಲಾದ ಪ್ರಮಾಣ ಪತ್ರಗಳ ಮುಂದಿನ ಹಂತದಲ್ಲಿ ವಿದ್ಯಾರ್ಥಿಗಳು ಉಪಯೋಗಿಸಲು ಅಂದರೆ ಪ್ರವೇಶಾತಿ ಮತ್ತು ಉದ್ಯೋಗ ಸಂದರ್ಭಗಳಲ್ಲಿ ಅಂಕಪಟ್ಟಿಗಳ ಪರಿಶೀಲನೆ ನಡೆದಾಗ ವಿದ್ಯಾರ್ಥಿಗಳು ಅಧ್ಯಯನ ಮಾಡಿದ ವಿಶ್ವವಿದ್ಯಾಲಯದಿಂದ ಪ್ರಮಾಣ ಪತ್ರದ ದೃಢೀಕರಣವನ್ನು ಮಾಡಿಸಿಕೊಂಡು ಬರಲು ತಿಳಿಸಿ, ವಿಶ್ವವಿದ್ಯಾಲಯಕ್ಕೆ ವಿದ್ಯಾರ್ಥಿಗಳನ್ನು ಕಳುಹಿಸುತ್ತಿದ್ದರು ಮತ್ತು ಕುಲಸಚಿವರು(ಮೌಲ್ಯಮಾಪನ) ಕಾರ್ಯಾಲಯದಿಂದ ದೃಢೀಕರಣಕ್ಕಾಗಿ ಒಂದು ಪ್ರಮಾಣ ಪತ್ರ ರೂ. 250/- ರಂತೆ 06 ಅಂಕ ಪಟ್ಟಿಗಳಿಗೆ ಒಟ್ಟು ಅಂದಾಜು ರೂ.1500/-ಗಳು ವಿದ್ಯಾರ್ಥಿಗಳು ಭರಿಸಬೇಕಾಗುತ್ತದೆ. ವಿದ್ಯಾರ್ಥಿಗಳು ಈಗಾಗಲೇ ಪರೀಕ್ಷಾ ಶುಲ್ಕದಲ್ಲಿ ಪ್ರಮಾಣ ಪತ್ರಗಳ ಶುಲ್ಕವನ್ನು ಭರಿಸಿರುವುದರಿಂದ ಹಾಗೂ ಸರ್ಕಾರವು ಮುದ್ರಿತ ಪ್ರಮಾಣ ಪತ್ರಗಳನ್ನು ವಿತರಿಸಲು ತಿಳಿಸಿರುವುದರಿಂದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಟೆಂಡರ್ ಆಹ್ವಾನಿಸಿ ಪ್ರಮಾಣ ಪತ್ರಗಳನ್ನು ಮುದ್ರಿಸಿ ವಿದ್ಯಾರ್ಥಿಗಳಿಗೆ ನೀಡಲಾಗಿದೆ.

		MSIL ನಲ್ಲಿ ಪದವಿ ಪ್ರಮಾಣ ಪತ್ರಗಳನ್ನು ಖರೀಸುವುದು ದುಬಾರಿಯಾಗಿರುವುದರಿಂದ GeM ಮೂಲಕ ಟೆಂಡರ್ ಆಹ್ವಾನಿಸಿ ಕಡಿಮೆ ದರಕ್ಕೆ ಮುದ್ರಿಸಲಾಗಿದೆ. ಸದರಿ ಖರೀದಿಗೆ ವಿಶ್ವವಿದ್ಯಾಲಯದ ಬೃಹತ ಖರೀದಿ ಸಮಿತಿ ಮತ್ತು ಸಿಂಡಿಕೇಟ್ ಸಭೆ ಅನುಮೋದನೆ ಪಡೆಯಲಾಗಿದೆ. **ಪದವಿ ಪ್ರಮಾಣ ಪತ್ರ ಹಾಗೂ ಅಂಕ ಪಟ್ಟಿಗಳು 15 Security Feature ಗಳನ್ನು ಒಳಗೊಂಡಿರುತ್ತದೆ. ಶ್ರೀ ದತ್ತಾತ್ರೇಯ ಕುಲಕರ್ಣಿ ಎಂಬ ಆರ್.ಟಿ.ಐ. ಕಾರ್ಯಕರ್ತರು ವಿಶ್ವವಿದ್ಯಾಲಯಕ್ಕೆ ಮಾಹಿತಿ ಹಕ್ಕು ಅಧಿನಿಯಮ-2005 ರಡಿ ಮಾಹಿತಿಗೆ ಅರ್ಜಿ ಸಲ್ಲಿಸಿ ವಿಶ್ವವಿದ್ಯಾಲಯದಿಂದ ಅಧಿಕೃತ ಮಾಹಿತಿಯನ್ನು ಪಡೆಯಬಹುಗಿತ್ತು. ಆದರೆ, ಸದರಿಯವರು ಮೊದಲನೇ ಬಾರಿ ಆಹ್ವಾನಿಸಿದ ಟೆಂಡರ್ ಆಧಾರಿಸಿ ಲೋಕಾಯುಕ್ತರಿಗೆ ದೂರು ನೀಡಿರಬಹುದು. ಇದರಲ್ಲಿ ಯಾವುದೇ ಹುರಳಿಲ್ಲ ಹಾಗೂ ಸತ್ಯಕ್ಕೆ ದೂರವಾದದ್ದು ಎಂದು ಸಭೆಗೆ ತಿಳಿಸಿದರು.** **<u>ಡಾ. ಮಹಾಂತೇಶ ಕಂಬಾರ:-</u>** **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಇತಿಹಾಸದಲ್ಲಿಯೇ ಮೊದಲ ಬಾರಿಗೆ ಅಂಕಪಟ್ಟಿಗಳು ಹಾಗೂ ಪದವಿ ಪ್ರಮಾಣ ಪತ್ರಗಳನ್ನು ಮುದ್ರಿಸುವ ಕಾಮಗಾರಿ ಟೆಂಡರ್‌ನ್ನು ಹೊರ ರಾಜ್ಯದ ಗುತ್ತಿಗೆದಾರರಿಗೆ ನೀಡಲಾಗಿದೆ. ಇದರಿಂದಾಗಿ ನಕಲಿ ಅಂಕಪಟ್ಟಿಗಳನ್ನು ಸೃಷ್ಟಿಸಿ ದುರುಪಯೋಗಪಡಿಸಿಕೊಳ್ಳಬಹುದು.** **ಪ್ರತಿಕ್ರಿಯಿಸಿದ ನಿಕಟಪೂರ್ವ ಕುಲಸಚಿವರು(ಮೌಲ್ಯಮಾಪನ) ಇವರು ಪದವಿ ಪ್ರಮಾಣ ಪತ್ರ ಹಾಗೂ ಅಂಕಪಟ್ಟಿಗಳು ಗೌಪ್ಯವಾದ ಸೆಕ್ಯುರಿಟಿ Feature ಗಳನ್ನು ಹೊಂದಿದ್ದು ನಕಲು ಮಾಡಲು ಸಾಧ್ಯವಾಗದು ಎಂದು ತಿಳಿಸಿದರು. ಮುಂದುವರೆದು, ಲೆಕ್ಕಪರಿಶೋಧನೆಯಲ್ಲಿಯೂ ಕೂಡ ಯಾವುದೇ ಆಕ್ಷೇಪಣೆಯಾಗಿರುವುದಿಲ್ಲ ಎಂದರು.** **<u>ಮಾನ್ಯ ಕುಲಪತಿಗಳು:</u>** **ಅಂಕಪಟ್ಟಿಗಳು ಹಾಗೂ ಪದವಿ ಪ್ರಮಾಣ ಪತ್ರಗಳನ್ನು ಮುದ್ರಿಸಿದ್ದರಿಂದ ವಿದ್ಯಾರ್ಥಿಗಳಿಗೆ ಅನುಕೂಲವಾಗಿರುತ್ತದೆ ಮತ್ತು ವಿಶ್ವವಿದ್ಯಾಲಯಕ್ಕೆ ಆರ್ಥಿಕ ಹೊರೆಯಾಗಿರುವುದಿಲ್ಲ ಎಂದರು.**
15	2026/04/15	2025-26ನೇ ಶೈಕ್ಷಣಿಕ ಸಾಲಿನಲ್ಲಿ ಶೇ. 50 ಕ್ಕಿಂತ ಕಡಿಮೆ ಮೌಲ್ಯಾಂಕ ಪಡೆದ ಮಹಾವಿದ್ಯಾಲಯಗಳ ಶೈಕ್ಷಣಿಕ ಹಾಗೂ ಮೂಲಭೂತ ಸೌಕರ್ಯಗಳ ವಾಸ್ತವ ಸ್ಥಿತಿ ವರದಿ ಪಡೆದುಕೊಳ್ಳಲು ಒಟ್ಟು 07 ವಿಶೇಷ ಸಮಿತಿಗಳನ್ನು ಸಿಂಡಿಕೇಟ್ ಸಭೆಯ ನಿರ್ಣಯದಂತೆ ರಚಿಸಲಾಗಿತ್ತು. ಸದರಿ ಸಮಿತಿಗಳು ಮಹಾವಿದ್ಯಾಲಯಗಳಿಗೆ ಭೇಟಿ ನೀಡಿ ಸಲ್ಲಿಸಿರುವ ವರದಿಗಳನ್ನು ಮಂಡಿಸುವ ಕುರಿತು.
	ತೀರ್ಮಾನ	**2025-26ನೇ ಶೈಕ್ಷಣಿಕ ಸಾಲಿನಲ್ಲಿ ಶೇ. 50 ಕ್ಕಿಂತ ಕಡಿಮೆ ಮೌಲ್ಯಾಂಕ ಪಡೆದ ಮಹಾವಿದ್ಯಾಲಯಗಳ ಶೈಕ್ಷಣಿಕ ಹಾಗೂ ಮೂಲಭೂತ ಸೌಕರ್ಯಗಳ ವಾಸ್ತವ ಸ್ಥಿತಿ ವರದಿ ಪಡೆದುಕೊಳ್ಳಲು ಒಟ್ಟು 07 ವಿಶೇಷ ಸಮಿತಿಗಳನ್ನು ಸಿಂಡಿಕೇಟ್ ಸಭೆಯ ನಿರ್ಣಯದಂತೆ ರಚಿಸಲಾಗಿತ್ತು. ಸದರಿ ಸಮಿತಿಗಳು ಮಹಾವಿದ್ಯಾಲಯಗಳಿಗೆ ಭೇಟಿ ನೀಡಿ ಸಲ್ಲಿಸಿರುವ ವರದಿಗಳನ್ನು ಸಭೆಯು ಪರಿಶೀಲಿಸಿತು ಹಾಗೂ ಸದರಿ ಮಹಾವಿದ್ಯಾಲಯಗಳಲ್ಲಿ ವ್ಯವಸ್ಥೆಯನ್ನು ಸರಿಪಡಿಸುವ ನಿಟ್ಟಿನಲ್ಲಿ ಪ್ರತಿ ಮಹಾವಿದ್ಯಾಲಯಕ್ಕೆ ಒಂದು ಲಕ್ಷ ರೂಪಾಯಿ ದಂಡ ವಿಧಿಸಲು ಹಾಗೂ ಬಯೋಮೇಟ್ರಿಕ್ ಹಾಜರಾತಿ(ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗಳಿಗೆ) ಕಡ್ಡಾಯಗೊಳಿಸಲು ತೀರ್ಮಾನಿಸಿತು.**
16	2026/04/16	ವಿಶ್ವವಿದ್ಯಾಲಯದ 2024-25ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುವ ಕುರಿತು.
	ತೀರ್ಮಾನ	**ಪ್ರಸಾರಾಂಗವು ಸಿದ್ಧಪಡಿಸಿದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 2024-25ನೇ ಸಾಲಿನ ವಾರ್ಷಿಕ ವರದಿಗೆ ಸಭೆಯು ಅನುಮೋದನೆ ನೀಡಿತು.**

<table>
<tr><td>17</td><td>2026/04/17</td><td>ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಕಾಲೇಜು ಅಭಿವೃದ್ಧಿ ಮಂಡಳಿಗೆ ನಿರ್ದೇಶಕರ ನೇಮಕ ಹಾಗೂ ವಾಣಿಜ್ಯ ನಿಖಾಯಕ್ಕೆ ಡೀನರ ನಾಮನಿರ್ದೇಶನ ಮಾಡಿರುವುದಕ್ಕೆ ಅನುಸಮರ್ಥನೆ ಕೋರಿರುವ ಕುರಿತು.</td></tr>
<tr><td></td><td>ತೀರ್ಮಾನ</td><td>ಡಾ.ಜೆ. ಮಂಜಣ್ಣ, ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ ಇವರನ್ನು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಕಾಲೇಜು ಅಭಿವೃದ್ಧಿ ಮಂಡಳಿಗೆ ನಿರ್ದೇಶಕರ ನೇಮಕ ಮಾಡಲಾಗಿದೆ ಹಾಗೂ ಪ್ರೊ. ಎಸ್. ಸಿ. ಪಾಟೀಲ್, ಹಿರಿಯ ಪ್ರಾಧ್ಯಾಪಕರು, ಎಂ.ಬಿ.ಎ. ವಿಭಾಗ ಇವರನ್ನು ವಾಣಿಜ್ಯ ನಿಖಾಯಕ್ಕೆ ಡೀನರಾಗಿ ನೇಮಕ ಮಾಡಿ ಆದೇಶಿಸಲಾಗಿದೆ. ಸದರಿ ವಿಷಯಕ್ಕೆ ಸಭೆಯು ಅನುಸಮರ್ಥನೆ ನೀಡಿತು.</td></tr>
<tr><td>18</td><td>2026/04/18</td><td>ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಬೋಧಕ ಸಿಬ್ಬಂದಿಗಳಿಗೆ ಕುಲಪತಿಗಳ ಹುದ್ದೆಗೆ ಅರ್ಜಿ ಸಲ್ಲಿಸಲು ಅನುಮತಿ ನೀಡಿರುವುದ್ದಕ್ಕೆ ಸಿಂಡಿಕೇಟ್ ಸಭೆಯ ಅನುಸಮರ್ಥನೆಗೆ ಮಂಡಿಸಿರುವ ಕುರಿತು.</td></tr>
<tr><td></td><td>ತೀರ್ಮಾನ</td><td>ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಈ ಕೆಳಕಾಣಿಸಿದ ಬೋಧಕ ಸಿಬ್ಬಂದಿಗಳಿಗೆ ಕುಲಪತಿಗಳ ಹುದ್ದೆಗೆ ಅರ್ಜಿ ಸಲ್ಲಿಸಲು ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡಿರುವುದ್ದಕ್ಕೆ ಸಿಂಡಿಕೇಟ್ ಸಭೆಯು ಅನುಸಮರ್ಥನೆ ನೀಡಿತು.
<table>
<tr><th>Sl No</th><th>Name of the Teaching Staff</th><th>Details of permission to apply</th><th>Post applied</th></tr>
<tr><td>1</td><td>Prof. V. F. Nagannawar Senior Professor Department of English.</td><td>Central University of Hyderabad, Prof. C. R. Rao Road, Ganchibowli, Hyderabad-500 046, Telangana.</td><td>Vice-Chancellor</td></tr>
<tr><td>2</td><td>Prof. Basavaraj Padmashali Senior Professor, Department of Chemistry.</td><td>Central University of Hyderabad, Prof. C. R. Rao Road, Ganchibowli, Hyderabad-500 046, Telangana.</td><td>Vice-Chancellor</td></tr>
</table>
</td></tr>
<tr><td>19</td><td>2026/04/19</td><td>ಡಾ. ಕಿರಣ ಪ್ರಕಾಶ ಸವಣೂರ, ಸಹ ಪ್ರಾಧ್ಯಾಪಕರು, ಇವರನ್ನು ಗ್ರಂಥಾಲಯ ಮತ್ತು ವಿಜ್ಞಾನ ವಿಭಾಗದ ಅಧ್ಯಕ್ಷರನ್ನಾಗಿ ನೇಮಿಸಿ ಆದೇಶಿಸಿದ್ದನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆ ನೀಡುವ ಕುರಿತು.</td></tr>
<tr><td></td><td>ತೀರ್ಮಾನ</td><td>ಡಾ. ಕಿರಣ ಪ್ರಕಾಶ ಸವಣೂರ, ಸಹ ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗ ಇವರ ವಿಭಾಗದ ಅಧ್ಯಕ್ಷರ ಅವಧಿಯು ದಿನಾಂಕ: 17-03-2026 ರಂದು ಮುಕ್ತಾಯವಾಗುವ ಹಿನ್ನಲೆಯಲ್ಲಿ ವಿಭಾಗದ ಅಧ್ಯಕ್ಷರ ಹುದ್ದೆಯಿಂದ ಬಿಡುಗಡೆಗೊಳಿಸಿ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಅಧಿನಿಯಮ-34 (5) (7) ಮತ್ತು (8) ರ ಮೇರೆಗೆ ಸದರಿ ವಿಭಾಗದಲ್ಲಿ ಯಾವುದೇ ಪ್ರಾಧ್ಯಾಪಕರು ಹಾಗೂ ಸಹ ಪ್ರಾಧ್ಯಾಪಕರು ಇಲ್ಲದೇ ಇರುವುದರಿಂದ ಪುನಃ ಡಾ. ಕಿರಣ ಪ್ರಕಾಶ ಸವಣೂರ, ಸಹ ಪ್ರಾಧ್ಯಾಪಕರು, ಇವರನ್ನು ದಿನಾಂಕ: 18-03-2026 ರಿಂದ ಅನ್ವಯವಾಗುವಂತೆ ಮುಂದಿನ ಎರಡು ವರ್ಷದ ಅವಧಿಗೆ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗಕ್ಕೆ ಅಧ್ಯಕ್ಷರನ್ನಾಗಿ ನೇಮಕ ಮಾಡಿ ಆದೇಶಿಸಲಾಗಿದೆ. ಸದರಿ ವಿಷಯಕ್ಕೆ ಸಭೆಯು ಅನುಸಮರ್ಥನೆ ನೀಡಿತು.</td></tr>
<tr><td>20</td><td>2026/04/20</td><td>ಪ್ರೊ. ವಿನಾಯಕ ಎಂ. ಬಂಕಾಪೂರ, ನಿವೃತ್ತ ಪ್ರಾಧ್ಯಾಪಕರು,ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗ ಇವರಿಗೆ ಹೆಚ್ಚುವರಿಯಾಗಿ ಗಳಿಕೆ ರಜೆ ಜಮೆ ಮಾಡುವಂತೆ ವಿನಂತಿಸಿರುವ ಕುರಿತು.</td></tr>
</table>

	ತೀರ್ಮಾನ	**ಪ್ರೊ. ವಿನಾಯಕ ಎಂ. ಬಂಕಾಪೂರ, ನಿವೃತ್ತ ಪ್ರಾಧ್ಯಾಪಕರು,ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗ ಇವರಿಗೆ ದಿನಾಂಕ 01-06-2016 ರಿಂದ 31-08-2025 ರ ವರೆಗೆ ಬಿಡುವಿರುವ ಅವಧಿಯಲ್ಲಿ(Vacation Period) ಪ್ರಭಾರಿ ಗ್ರಂಥಪಾಲಕರಾಗಿ ಕಾರ್ಯನಿರ್ವಹಿಸಿದಕ್ಕೆ ಹೆಚ್ಚುವರಿಯಾಗಿ ಕೆ.ಸಿ.ಎಸ್.ಆರ್. ನಿಯಮ-113ರ ಖಂಡಿಕೆ-3 ರ ಉಪ ಖಂಡಿಕೆ-ಬಿ ರನ್ವಯ ಹೆಚ್ಚುವರಿಯಾಗಿ 85 ದಿನಗಳ ಗಳಿಕೆ ರಜೆಯನ್ನು ಅವರ ಖಾತೆಗೆ ಜಮೆ ಮಾಡುವುದಕ್ಕೆ ಸಭೆಯು ಅನುಮೋದನೆ ನೀಡಿತು.**
21	2026/04/21	ಬೋಧಕೇತರ ಸಿಬ್ಬಂದಿಗೆ ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡುವ ಕುರಿತು
	ತೀರ್ಮಾನ	**ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀಮತಿ ವಾಣಿ ಪೋತದಾರ, ಗಣಕಯಂತ್ರ ನಿರ್ವಾಹಕರು ಇವರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಿಂದ, ಬೆಂಗಳೂರು ನಗರ ವಿಶ್ವವಿದ್ಯಾಲಯಕ್ಕೆ ಇಲ್ಲಿಗೆ ವಿಶ್ವವಿದ್ಯಾಲಯದಡಿಯಲ್ಲಿ ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡುವಂತೆ ವಿನಂತಿಸಿಕೊಂಡಿದ್ದರು. ಅದರಂತೆ ಸದರಿಯವರಿಗೆ ಹುದ್ದೆರಹಿತವಾಗಿ ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡಲಾಗಿದೆ. ಪುಸ್ತುತ ಶ್ರೀಮತಿ ವಾಣಿ ಪೋತದಾರ ಇವರು ಹುದ್ದೆ ಸಹಿತವಾಗಿ ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡುವಂತೆ ವಿನಂತಿಸಿರುವ ವಿಷಯವನ್ನು ಸಭೆಯ ಗಮನಕ್ಕೆ ತರಲಾದ ಹಿನ್ನೆಲೆಯಲ್ಲಿ, ಸದರಿಯವರ ಮನವಿಯನ್ನು ಸಭೆಯು ತಿರಸ್ಕರಿಸಿತು.**
22	2026/04/22	ಪ್ರೊ. ಎನ್. ಮಾರುತಿರಾವ, ಪ್ರಾಧ್ಯಾಪಕರು, ಎಂ.ಬಿ.ಎ ವಿಭಾಗ ಇವರ ವಿಭಾಗವಾರು ಸಂಗ್ರಹಿಸಿದ ಮಾಹಿತಿ ಕುರಿತು.
	ತೀರ್ಮಾನ	**ಪ್ರೊ. ಎನ್. ಮಾರುತಿರಾವ, ಪ್ರಾಧ್ಯಾಪಕರು ಇವರಿಗೆ ಸಂಬಂಧಿಸಿದಂತೆ, ರಾಜ್ಯಪಾಲರ ಅಧೀನ ಕಾರ್ಯದರ್ಶಿ, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ಬೆಂಗಳೂರು ಇವರ ಪತ್ರ ದಿನಾಂಕ: 09.03.2026 ರಲ್ಲಿ "I am directed to inform you that the report submitted vide the letter cited at ref was examined and it is conveyed that to initiate punishment proceedings against the complainant that is Dr. N. Maruti Rao, Professor, Dept of Business Administration, RCU, for making false allegations, acting with malicious intent and misusing the name and position in the University to continuously spam every organization with false allegations instead of Focusing on academics and the grow of the university ಎಂದು ಸೂಚನೆ ನೀಡಿರುವದರಿಂದ ಕುಲಸಚಿವರು ಸಭೆಯ ಮಾರ್ಗದರ್ಶನ ಕೋರಿದರು.** **ಗೌರವಾನ್ವಿತ ರಾಜ್ಯಪಾಲರ ಕಛೇರಿಯಿಂದ ಬಂದಿರುವ ಪತ್ರದಲ್ಲಿ ಪ್ರೊ. ಎನ್. ಮಾರುತಿರಾವ, ಇವರ ವಿರುದ್ಧ initiate punishment proceedings ಎಂದು ಸೂಚನೆ ನೀಡಿರುವದರಿಂದ ಅಗತ್ಯ ಶಿಸ್ತು ಕ್ರಮ ಜರುಗಿಸಲು ನಿಯಮಾನುಸಾರ ಕ್ರಮ ಕೈಗೊಳ್ಳಲು, ಅಗತ್ಯವಿದ್ದಲ್ಲಿ ನಿವೃತ್ತ ನ್ಯಾಯಾಧೀಶರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಸಭೆಯು ತೀರ್ಮಾನಿಸಿತು.**
23	2026/04/23	ಮಹರ್ಷಿ ಸಂದೀಪನಿ ರಾಷ್ಟ್ರೀಯ ವೇದ ಸಂಸ್ಕೃತ ಶಿಕ್ಷಾಮಂಡಳಿ ನಡೆಸುವ 12ನೇ ತರಗತಿಗೆ ಸಮಾನವಾದ ವೇದವಿಭೂಷಣ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ವಿವಿಧ ಕೋರ್ಸಗಳಿಗೆ ಸೇರಲು ಅರ್ಹತೆ ನೀಡುವಂತೆ ಕೋರಿರುವ ಕುರಿತು.

	ತೀರ್ಮಾನ	**ಭಾರತ ಸರ್ಕಾರ ಶಿಕ್ಷಣ ಸಚಿವಾಲಯ, ಉನ್ನತ ಶಿಕ್ಷಣ ಇಲಾಖೆ, ಶಾಸ್ತ್ರಿ ಭವನ, ನವದೆಹಲಿ ಇವರ ಪತ್ರದಲ್ಲಿ ಉಜ್ಜಯನಿಯಲ್ಲಿರುವ ಮಹರ್ಷಿ ಸಂದೀಪನಿ ರಾಷ್ಟ್ರೀಯ ವೇದ ಸಂಸ್ಕೃತಿ ಶಿಕ್ಷಾಮಂಡಳಿ ನಡೆಸುವ 12ನೇ ತರಗತಿಗೆ ಸಮಾನವಾದ ವೇದವಿಭೂಷಣ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ವಿವಿಧ ಕೋರ್ಸಗಳಿಗೆ ಸೇರಲು ಅರ್ಹತೆ ನೀಡುವಂತೆ ಕೋರಿರುವ ಪ್ರಸ್ತಾವನೆಗೆ ವಿದ್ಯಾವಿಷಯಕ್ ಪರಿಷತ್ ಸಭೆಯು ವಿದ್ಯಾರ್ಥಿಗಳ ಪ್ರಮಾಣ ಪತ್ರಗಳನ್ನು "Equivalence Committee" ಯ ಅಭಿಪ್ರಾಯಕ್ಕಾಗಿ ಸಲ್ಲಿಸುವುದು ಹಾಗೂ ಸಮಿತಿಯ ಅಭಿಪ್ರಾಯದ ಮೇರೆಗೆ ಉಜ್ಜಯನಿಯಲ್ಲಿರುವ ಮಹರ್ಷಿ ಸಂದೀಪನಿ ರಾಷ್ಟ್ರೀಯ ವೇದ ಸಂಸ್ಕೃತಿ ಶಿಕ್ಷಾಮಂಡಳಿ ವಿದ್ಯಾರ್ಥಿಗಳಿಗೆ ಅರ್ಹತಾ ಪ್ರಮಾಣ ಪತ್ರ ನೀಡಲು ತೀರ್ಮಾನಿಸಿರುವ ವಿಷಯವನ್ನು ಸಿಂಡಿಕೇಟ್ ಸಭೆಯ ಗಮನಕ್ಕೆ ತರಲಾಯಿತು. ಸಭೆಯು ವಿದ್ಯಾವಿಷಯಕ್ ಪರಿಷತ್ ಸಭೆಯ ತೀರ್ಮಾನದಂತೆ ಕ್ರಮವಹಿಸಲು ಸೂಚಿಸಿತು.**
24	2026/04/24	ಸ್ನಾತಕ ವಿಭಾಗಗಳ ನೂತನ ಪಠ್ಯಕ್ರಮಗಳ(SEP) ಪರಿಷ್ಕೃತ ನಿಯಮಾವಳಿಗಳನ್ನು(Regulations) ಅನುಮೋದಿಸುವ ಕುರಿತು
	ತೀರ್ಮಾನ	**ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ 2024-25ನೇ ಶೈಕ್ಷಣಿಕ ಸಾಲಿನಿಂದ ಜಾರಿಗೊಳಿಸಲಾಗಿರುವ ಸ್ನಾತಕ ನೂತನ ಪಠ್ಯಕ್ರಮಗಳ(SEP) ನಿಯಮಾವಳಿಗಳನ್ನು ಉನ್ನತ ಶಿಕ್ಷಣ ಇಲಾಖೆಯವರು ಸೂಚಿಸಿರುವಂತೆ ಪರಿಷ್ಕರಿಸಿದ ನಿಯಮಾವಳಿಗಳನ್ನು(Regulations) ಹಾಗೂ ಕೆಲವು ಪೂರಕ ಅಂಶಗಳನ್ನು ಸೇರಿಸಿ ಅಳವಡಿಸಿಕೊಳ್ಳಲು ಸಭೆಯು ಅನುಮೋದನೆ ನೀಡಿತು.**
25	2026/04/25	ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ ನಡೆಯುತ್ತಿರುವ ಎಂ.ಇಡಿ ಕೋರ್ಸನ ಶುಲ್ಕದಲ್ಲಿ ಶೇ. 15 ರಷ್ಟು ಕಡಿಮೆ ಮಾಡಿರುವ ಬಗ್ಗೆ ಸಭೆಯ ಅನುಸಮರ್ಥನೆ ನೀಡುವ ಕುರಿತು.
	ತೀರ್ಮಾನ	**ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿರುವ ಕನ್ನಡ, ಸಮಾಜಶಾಸ್ತ್ರ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗ, ಎಂ.ಸಿ.ಎ. ಕೋರ್ಸಗಳಿಗೆ 2025-26 ನೇ ಸಾಲಿನಲ್ಲಿ ಶೇಕಡಾ. 15 ರಷ್ಟು ಪ್ರವೇಶ ಶುಲ್ಕವನ್ನು ಕಡಿಮೆಗೊಳಿಸುವಂತೆ ಸಿಂಡಿಕೇಟ್ ಸಭೆಯಲ್ಲಿ ತೀರ್ಮಾನಿಸಿ ಅನುಮೋದನೆ ಪಡೆದು ವಿವಿಧ ವಿಭಾಗಗಳಿಗೆ ಕಛೇರಿ ಆದೇಶ ನೀಡಲಾಗಿತ್ತು. ಮುಂದುವರೆದು, ಸ್ನಾತಕೋತ್ತರ ಎಂ.ಇಡಿ ಕೋರ್ಸಗೆ ವಿದ್ಯಾರ್ಥಿಗಳ ಪ್ರವೇಶಾತಿ ಕಡಿಮೆಯಾಗಿರುವುದರಿಂದ ಮಾನ್ಯ ಕುಲಪತಿಗಳು ಎಂ.ಇಡಿ. ಕೋರ್ಸಿನ ಶುಲ್ಕದಲ್ಲಿ ಶೇ. 15 ರಷ್ಟು ಕಡಿಮೆ ಮಾಡಲು ಅನುಮೋದನೆ ನೀಡಿರುತ್ತಾರೆ. ಕಾರಣ, ಸದರಿ ವಿಷಯಕ್ಕೆ ಸಿಂಡಿಕೇಟ್ ಸಭೆಯು ಅನುಸಮರ್ಥನೆ ನೀಡಿತು.** **ಮುಂದುವರೆದು, ಪ್ರವೇಶಾತಿ ಶುಲ್ಕ ರಿಯಾಯಿತಿಯನ್ನು ಒಂದು ವರ್ಷಕ್ಕೆ ಸೀಮಿತಗೊಳಿಸುವ (One time concession) ಪರತ್ತು ವಿಧಿಸುವಂತೆ ಸಭೆಯು ಸೂಚಿಸಿತು.**
26	2026/04/26	ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಮುಖ್ಯ ಆವರಣದ ವಿವಿಧ ಸ್ನಾತಕೋತ್ತರ ವಿಭಾಗಗಳಲ್ಲಿ ಪ್ರವೇಶಾತಿ ಕುಂಠಿತಗೊಳ್ಳುತ್ತಿರುವ ವಿಷಯದ ಕುರಿತು ಸಲ್ಲಿಸಿದ ವರದಿ ಮಂಡಿಸುವ ಕುರಿತು.
	ತೀರ್ಮಾನ	**ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಮುಖ್ಯ ಆವರಣದ ವಿವಿಧ ಸ್ನಾತಕೋತ್ತರ ವಿಭಾಗಗಳಲ್ಲಿ ಪ್ರವೇಶಾತಿ ಕುಂಠಿತಗೊಳ್ಳುತ್ತಿರುವ ವಿಷಯದ ಕುರಿತು ವರದಿ ನೀಡಲು ಸದಸ್ಯರಾದ ರಫೀ ಭಂಡಾರಿ ಇವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿತ್ತು. ಸದರಿ ಸಮಿತಿಯು ನಾಲ್ಕು ಸಭೆಗಳನ್ನು ಚರ್ಚಿಸಿ ವಿಭಾಗಗಳಲ್ಲಿ ಪ್ರವೇಶಾತಿ ಹೆಚ್ಚಿಸಲು**

		ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ಸಲ್ಲಿಸಿದ ವರದಿಯನ್ನು ಸಭೆಗೆ ಮಂಡಿಸಲಾಯಿತು. ಸದರಿ ವರದಿಯನ್ನು ಪರಿಶೀಲಿಸಿ ಸಭೆಯು ಅನುಮೋದನೆ ನೀಡಿತು ಹಾಗೂ ವರದಿಯಲ್ಲಿ ತಿಳಿಸಿರುವ ಶಿಫಾರಸ್ಸುಗಳನ್ನು ಕಾರ್ಯರೂಪಕ್ಕೆ ತರಲು/ಅಳವಡಿಸಿಕೊಳ್ಳಲು ಸಭೆಯು ನಿರ್ಧರಿಸಿತು.
27	2026/04/27	ಸ್ನಾತಕ ವಿಭಾಗಗಳ P.G. Diploma, P.G. Advanced Diploma, Diploma and Certificate Course ಪಠ್ಯಕ್ರಮಗಳ ನಿಯಮಾವಳಿಗಳನ್ನು (Regulations) ಅನುಮೋದಿಸುವ ಕುರಿತು.
	ತೀರ್ಮಾನ	**ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ P.G. Diploma, P.G. Advanced Diploma, P.G. Diploma and Certificate Course ಪಠ್ಯಕ್ರಮಗಳ ನಿಯಮಾವಳಿಗಳ (Regulations) ಶಿರ್ಷಿಕೆಯಲ್ಲಿ ಕೆಲವು ಬದಲಾವಣೆ ಮಾಡಲು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.** **ಮುಂದುವರೆದು, ಭವಿಷ್ಯದಲ್ಲಿ ಯಾವುದೇ ಸಂಸ್ಥೆಯವರು ಮೇಲ್ಕಾಣಿಸಿದ ಕೋರ್ಸಗಳನ್ನು ಪ್ರಾರಂಭಿಸಲು ಇಚ್ಚಿಸಿದಲ್ಲಿ ಸದರಿಯವರಿಗೆ ನಿಯಮಾನುಸಾರ ಅನುಮತಿ ನೀಡಲು ಸಭೆಯು ತೀರ್ಮಾನಿಸಿತು.**
28	2026/04/28	ಸ್ನಾತಕ ವಿಭಾಗಗಳ B.Ed ಪಠ್ಯಕ್ರಮಗಳ ಪರಿಷ್ಕೃತ ನಿಯಮಾವಳಿಗಳನ್ನು (Regulations) ಅನುಮೋದಿಸುವ ಕುರಿತು.
	ತೀರ್ಮಾನ	**ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ B.Ed ಪಠ್ಯಕ್ರಮಗಳ ಪರಿಷ್ಕೃತ ನಿಯಮಾವಳಿಗಳನ್ನು (Regulations) ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.**
29	2026/04/29	PMKVY 4.0 ಯೋಜನೆಯ ಅಡಿಯಲ್ಲಿ ತರಬೇತಿ(Short Term Training-STT) ಯನ್ನು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಧೀನದಲ್ಲಿರುವ 25 ಸರ್ಕಾರಿ ಮಹಾವಿದ್ಯಾಲಯಗಳಲ್ಲಿ ಅನುಷ್ಠಾನಗೊಳಿಸಲು ಅನುಸಮರ್ಥನೆ ನೀಡುವ ಕುರಿತು
	ತೀರ್ಮಾನ	**PMKVY 4.0 ಯೋಜನೆಯ ಅಡಿಯಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ 25 ಸರ್ಕಾರಿ ಮಹಾವಿದ್ಯಾಲಯಗಳಲ್ಲಿ ಪ್ರತಿ ಮಹಾವಿದ್ಯಾಲಯದಲ್ಲಿ 120 ಅಭ್ಯರ್ಥಿಗಳಿಗೆ ಅಲ್ಪಾವಧಿಯ ತರಬೇತಿ ನೀಡಲು ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ, ಬೆಂಗಳೂರು ಇವರು ಕಾರ್ಯಾದೇಶ ಹೊರಡಿಸಿರುತ್ತಾರೆ.** **ಅದರಂತೆ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಮಹಾವಿದ್ಯಾಲಯಗಳಲ್ಲಿ ಕರ್ನಾಟಕ ಸರ್ಕಾರ ಮತ್ತು ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ನಿರ್ದೇಶನ/ಮಾರ್ಗಸೂಚಿಗಳಂತೆ Date Analysis & Web Developer ವಿಷಯಗಳ ತರಬೇತಿ ನೀಡಲು ಪರಿಣಿತರು ವಿಶ್ವವಿದ್ಯಾಲಯ/ಮಹಾವಿದ್ಯಾಲಯಗಳಲ್ಲಿ ಅಲಭ್ಯತೆಯ ಕಾರಣ, ಅರ್ಹ ನೊಂದಾಯಿತ ಸೇವಾ ಪೂರೈಕೆದಾರರಿಂದ ಸೇವೆ ಪಡೆದು ತರಬೇತಿಯನ್ನು ಪ್ರಾರಂಭಿಸುವ ಕುರಿತು ಮಾನ್ಯ ಸರ್ಕಾರ/KSDC ಇವರನ್ನು ಕೋರಲಾಗಿತ್ತು.** **ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ಇ-ಮೇಲ್ ದಿನಾಂಕ: 06.03.2026 ರಂತೆ ವಿಶ್ವವಿದ್ಯಾಲಯದ ಹಂತದಲ್ಲಿಯೇ ಪ್ರಕ್ರಿಯೆ ಹಾಗೂ ನಿರ್ಣಯವನ್ನು ಕೈಗೊಂಡು STT ಕಾರ್ಯಕ್ರಮವನ್ನು ಯಶಸ್ವಿಯಾಗಿ ಪೂರ್ಣಗೊಳಿಸಲು ನಿರ್ದೇಶಿಸಿರುವುದರಿಂದ ವಿಶ್ವವಿದ್ಯಾಲಯದಿಂದ ಸರ್ಕಾರದ ಮಾರ್ಗಸೂಚಿಗಳಂತೆ ಕ್ರಮವಹಿಸಲು ಸಭೆಯು ಅನುಸಮರ್ಥನೆ ನೀಡಿತು.**

30	2026/04/30	**ಮಾನ್ಯ ಸಿಂಡಿಕೇಟ್ ಸದಸ್ಯರ ಸಭೆಯಲ್ಲಿ ಚರ್ಚೆಗಾಗಿ ಪ್ರಸ್ತಾಪಿಸಿರುವ ವಿಷಯಗಳು** **ರಫೀ ಭಂಡಾರಿ:** **1. ಭಾರತದ ಮಹಾನ್ ವಿಜ್ಞಾನಿ, ಶಿಕ್ಷಕ ಮತ್ತು ಮಾಜಿ ರಾಷ್ಟ್ರಪತಿಯಾದ ಡಾ. ಎ.ಪಿ.ಜೆ. ಅಬ್ದುಲ ಕಲಾಂ ಇವರ ಹೆಸರಿನಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಕೇಂದ್ರ ಸ್ಥಾಪಿಸಲು ಮನವಿ ಸಲ್ಲಿಸಿದ ಹಿನ್ನೆಲೆಯಲ್ಲಿ, ಸಭೆಯು ಅನುಮೋದನೆ ನೀಡಿತು ಹಾಗೂ 5 ಲಕ್ಷ ರೂಪಾಯಿಗಳ ಅನುದಾನವನ್ನು ಮೀಸಲಿರಿಸಲು ನಿರ್ಧರಿಸಿತು. ಪ್ರಾಧ್ಯಾಪಕರೊಬ್ಬರಿಗೆ ಅದರ ಜವಾಬ್ದಾರಿ ವಹಿಸಲು ಸಭೆಯು ತೀರ್ಮಾನಿಸಿತು.** **2. ಅಲ್ಪಸಂಖ್ಯಾತ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ Laptop ಒದಗಿಸಲು ವಿನಂತಿಸಿದ ಹಿನ್ನೆಲೆಯಲ್ಲಿ, ಸರ್ಕಾರಕ್ಕೆ ಅನುದಾನ ಕೋರಿ ಪತ್ರ ಬರೆಯಲು ಸಭೆಯು ನಿರ್ಧರಿಸಿತು.** **3. ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ವಸತಿ ನಿಲಯವನ್ನು ಕಲ್ಪಿಸುವ ಕುರಿತು ಸಲ್ಲಿಸಿದ ಮನವಿಗೆ, ಸರ್ಕಾರಕ್ಕೆ ಪತ್ರ ಬರೆಯಲು ನಿರ್ಧರಿಸಲಾಯಿತು.**
		ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೇ ವಿಷಯಗಳು
31	2026/04/I	ಪರೀಕ್ಷಾ ವಿಭಾಗಕ್ಕೆ ಸಂಬಂಧಿಸಿದಂತೆ ರಚಿಸಲಾದ "ಸುಧಾರಣಾ ಸಮಿತಿ" ಯ ಮಧ್ಯಂತರ ವರದಿಯನ್ನು ಸಿಂಡಿಕೇಟ್ ಸಭೆಯಲ್ಲಿ ಮಂಡಿಸುವ ಕುರಿತು.
	ತೀರ್ಮಾನ	**ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗಕ್ಕೆ ಸಂಬಂಧಿಸಿದಂತೆ ರಚಿಸಲಾದ "ಸುಧಾರಣಾ ಸಮಿತಿ"ಯು ಸಲ್ಲಿಸಿದ ಮಧ್ಯಂತರ ವರದಿಯನ್ನು ಸಭೆಯು ಪರಿಶೀಲಿಸಿತು ಹಾಗೂ ವರದಿಯಲ್ಲಿಯ ಶಿಫಾರಸ್ಸಿನಲ್ಲಿರುವ "ಪರೀಕ್ಷಾ ಅದಾಲತ್" ಮತ್ತು "ಸ್ಟುಡೆಂಟ್ ಅದಾಲತ್"ನ್ನು ಸ್ಥಾಪಿಸಲು ಸಭೆಯು ತೀರ್ಮಾನಿಸಿತು.**
32	2026/04/II	ಡಾ. ಮಹೇಶ ಗಾಹಪ್ಪನವರ, ಸಹ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು ಇವರು ವಿದ್ಯಾರ್ಥಿಗಳಿಗೆ ತರಗತಿಗಳನ್ನು ತೆಗೆದುಕೊಳ್ಳದೇ ಇರುವುದು ಹಾಗೂ AAA ಸಮಿತಿಗೆ ಸಂಬಂಧಿಸಿದಂತೆ ಯಾವುದೇ ಪೂರ್ವ ಸಿದ್ಧತೆ ಮಾಡಿಕೊಳ್ಳದೇ ಇರುವ ಕುರಿತಾಗಿ ಇಲಾಖಾ ವಿಚಾರಣೆ ನಡೆಸುವ ಕುರಿತು.
	ತೀರ್ಮಾನ	**ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆಯ ಮುಖ್ಯಸ್ಥರಾದ ಡಾ. ಮಹೇಶ ಗಾಜಪ್ಪನವರ ಇವರು ವಿದ್ಯಾರ್ಥಿಗಳಿಗೆ ತರಗತಿಗಳನ್ನು ತೆಗೆದುಕೊಳ್ಳದೇ ಇರುವುದು ಹಾಗೂ AAA ಸಮಿತಿಗೆ ಸಂಬಂಧಿಸಿದಂತೆ ಯಾವುದೇ ಪೂರ್ವ ಸಿದ್ಧತೆ ಮಾಡಿಕೊಳ್ಳದೇ ಇರುವುದಕ್ಕೆ ಸದರಿಯವರಿಗೆ ನೋಟಿಸ್ ಜಾರಿ ಮಾಡಲಾಗಿತ್ತು. ಪ್ರತ್ಯುತ್ತರವಾಗಿ ಸದರಿಯವರು ನೀಡಿರುವ ಉತ್ತರವು ಸಮಂಜಸವಿಲ್ಲವಾದ ಕಾರಣ ಇಲಾಖಾ ವಿಚಾರಣೆ ಮಾಡಲು ಸಭೆಯ ಮಾರ್ಗದರ್ಶನ ಕೋರಲಾಯಿತು.** **ಸದಸ್ಯರಾದ ಪ್ರೊ. ವಿ. ಎಸ್. ಶಿಗೇಹಳ್ಳಿ ಇವರು AAA ಸಮಿತಿಗೆ ಸಂಬಂಧಿಸಿದ ಪೂರ್ವ ಸಿದ್ಧತೆ ಮಾಡಿಕೊಳ್ಳುವುದು ವಿಭಾಗದ ಎಲ್ಲ ಅಧ್ಯಾಪಕರುಗಳ ಜವಾಬ್ದಾರಿಯಾಗಿದ್ದು ಓರ್ವ ಮುಖ್ಯಸ್ಥರನ್ನು ಹೊಣೆಗಾರರನ್ನಾಗಿ ಮಾಡುವುದು ಸರಿ ಅಲ್ಲ ಎಂದರು.** **ಚರ್ಚಿಸಿದ ಸಭೆಯು, ಮುಂದಿನ ದಿನಗಳಲ್ಲಿ ನ್ಯಾಕ್‌ನಲ್ಲಿ ಉತ್ತಮ ಅಂಕಗಳನ್ನು ಪಡೆಯಲು ನುರಿತ ಪ್ರಾಧ್ಯಾಪಕರನ್ನು ವಿಭಾಗದ ಮುಖ್ಯಸ್ಥರಾಗಿ ನೇಮಿಸುವುದು ಅವಶ್ಯವಿರುತ್ತದೆ. ಪ್ರಸ್ತುತ ವಿಭಾಗದಲ್ಲಿ ಪ್ರೊ. ಎಸ್. ಎಂ. ಗಂಗಾಧರಯ್ಯ ಇವರು ಅನುಭವ ಹೊಂದಿದ್ದು ಹಾಗೂ ಈ ಹಿಂದೆ ಸದರಿಯವರು ವಿಭಾಗದ ಮುಖ್ಯಸ್ಥರ ಜವಾಬ್ದಾರಿಯನ್ನು ನಿಭಾಯಿಸಿರುವುದರಿಂದ ಪ್ರೊ. ಎಸ್. ಎಂ. ಗಂಗಾಧರಯ್ಯ ಇವರನ್ನು ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆಯ ಮುಖ್ಯಸ್ಥರಾಗಿ ನೇಮಕ ಮಾಡಲು ಮತ್ತು ಸಂಬಂಧಿಸಿದ ಎಲ್ಲಾ ಜವಾಬ್ದಾರಿಗಳನ್ನು ನ್ಯಾಕ್ ಪೂರ್ಣಗೊಳ್ಳುವವರೆಗೆ ಸದರಿಯವರಿಗೆ ವಹಿಸಲು ಸಭೆಯು ತೀರ್ಮಾನಿಸಿತು.**

33	2026/04/III	ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ ಹಾಗೂ ಸ್ನಾತಕೋತ್ತರ ಕೇಂದ್ರ, ವಿಜಯಪುರ ಗ್ರಂಥಾಲಯಗಳಿಗೆ ತಾತ್ಕಾಲಿಕ ನೆಲೆಯಲ್ಲಿ ಸಿಬ್ಬಂದಿ ನೇಮಕ ಮಾಡುವ ಕುರಿತು.
	ತೀರ್ಮಾನ	**ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಗ್ರಂಥಾಲಯಗಳಲ್ಲಿ ಮಾನ್ಯಗೊಂಡ ವೃತ್ತಿಪರ ಹುದ್ದೆಗಳು ಇಲ್ಲದೇ ಇರುವುದರಿಂದ ಗ್ರಂಥಾಲಯದ ಕಾರ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ರಾಣಿ ಚನ್ನಮ್ಮ ವಿಶ್ವವಿದ್ಯಾಲಯಕ್ಕೆ (01 ಅತಿಥಿ ಸಹಾಯಕ ಗ್ರಂಥಪಾಲಕರು ಹಾಗೂ 02 ಅತಿಥಿ ಗ್ರಂಥಾಲಯ ಸಹಾಯಕರು, ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯಕ್ಕೆ (03 ಅತಿಥಿ ಗ್ರಂಥಾಲಯ ಸಹಾಯಕರು) ಹಾಗೂ ಸ್ನಾತಕೋತ್ತರ ಕೇಂದ್ರ, ವಿಜಯಪುರಕ್ಕೆ (01 ಅತಿಥಿ ಗ್ರಂಥಾಲಯ ಸಹಾಯಕರು) ಸೇರಿ ಒಟ್ಟು 07 ತಾತ್ಕಾಲಿಕ ಹುದ್ದೆಗಳಿಗೆ ಅಥವಾ ಅಗತ್ಯಕ್ಕೆ ತಕ್ಕಂತೆ ನಿಯೋಜಿಸಲು ಸಭೆಯು ಅನುಮೋದನೆ ನೀಡಿತು.**
34	2026/04/IV	ವಿಶ್ವವಿದ್ಯಾಲಯದ ಎಲ್ಲ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಯ ವರ್ಕಬುಕನ್ನು ಎಲ್ಲ ವಿಷಯಗಳಿಗೆ ಕಡ್ಡಾಯಗೊಳಿಸುವ ಕುರಿತು
	ತೀರ್ಮಾನ	**ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳು ಹಾಗೂ ಸಂಯೋಜಿತ ಮಹಾವಿದ್ಯಾಲಯಗಳಲ್ಲಿ ಬರುವ ಎಲ್ಲಾ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳ ಎಲ್ಲ ವಿಷಯಗಳಿಗೆ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ WorkBook ನ್ನು ಅಳವಡಿಸಲು ಸಭೆಯ ಮಾರ್ಗದರ್ಶನ ಕೋರಲಾಯಿತು.** **ವಿದ್ಯಾರ್ಥಿಗಳು ಸ್ವತಃ ಚಿಂತನೆ ಮಾಡಿ, ಪ್ರಶ್ನೆಗಳಿಗೆ ಉತ್ತರ ನೀಡಿ, ವಿವಿಧ ಚಟುವಟಿಕೆಗಳಲ್ಲಿ ಭಾಗವಹಿಸಿ ಸೃಜನಶೀಲತೆಯನ್ನು ಅಭಿವೃದ್ಧಿಪಡಿಸಲು ವಿಶ್ವವಿದ್ಯಾಲಯದ "ವಿದ್ಯಾವಿಷಯಕ್ ಪರಿಷತ್ ಸಭೆ"ಯು WorkBook ನ್ನು ಅಳವಡಿಸಲು ಅನುಮೋದನೆ ನೀಡಿರುತ್ತದೆ ಎಂಬ ಮಾಹಿತಿಯನ್ನು ಸಭೆಗೆ ನೀಡಲಾಯಿತು.** **ಶ್ರೀ ವಿನೀತ ಜೋಶಿ:-** **WorkBook ನ್ನು ಅಳವಡಿಸಲು ಆಕ್ಷೇಪವಿಲ್ಲ. ಈಗಾಗಲೇ ಇ-ವಿದ್ಯಾ ಶುಲ್ಕ, ಅಭಿವೃದ್ಧಿ ಶುಲ್ಕ ಮತ್ತು ಗುರುತಿನ ಚೀಟಿ ಶುಲ್ಕಗಳನ್ನು ವಿಧಿಸಿದ್ದರಿಂದ ಈ ಮುಂಚೆ WorkBook ನ್ನುPDF ಸ್ವರೂಪದಲ್ಲಿ ಉಚಿತವಾಗಿ ನೀಡಲು ನಿರ್ಧರಿಸಲಾಗಿತ್ತು. ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳ ಮೇಲೆ ಯಾವುದೇ ಹಣಕಾಸಿನ ಭಾರವನ್ನು ಹಾಕಬಾರದು ಎಂಬ ಕಾರಣಕ್ಕೆ ವಿಶ್ವವಿದ್ಯಾಲಯದ ಪ್ರಸಾರಾಂಗದಿಂದ ಮುದ್ರಿಸಿ ಸಮಂಜಸ ಮತ್ತು ಕೈಗೆಟುವ ದರದಲ್ಲಿ WorkBook ಲಭ್ಯವಾಗುವಂತೆ ಮಾಡಬೇಕು. ಯಾವುದೇ ಪರಿಸ್ಥಿತಿಯಲ್ಲಿಯೂ, ಖಾಸಗಿ ಪ್ರಕಾಶಕರಿಗೆ ಲಾಭ ಪಡೆಯುವ ಅವಕಾಶಗಳನ್ನು ಸೃಷ್ಟಿಸಬಾರದು.** **ಚರ್ಚಿಸಿದ ಸಭೆಯು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳು ಹಾಗೂ ಸಂಯೋಜಿತ ಮಹಾವಿದ್ಯಾಲಯಗಳಲ್ಲಿ ಬರುವ ಎಲ್ಲಾ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳ ಎಲ್ಲ ವಿಷಯಗಳಿಗೆ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ WorkBookನ್ನು ಅಳವಡಿಸಲು ಸಭೆಯು ತೀರ್ಮಾನಿಸಿತು. ಮುಂದುವರೆದು, ವಿಶ್ವವಿದ್ಯಾಲಯದ ಪ್ರಸಾರಾಂಗದಿಂದ WorkBook ನ್ನು ಕಡಿಮೆ ಬೆಲೆಗೆ ಮುದ್ರಿಸಿ ವಿತರಿಸಲು ಸೂಚಿಸಿತು.**

35	2026/04/V	2025-26 ನೇ ಸಾಲಿನ 3ನೇ ಖರೀದಿ ಸಮಿತಿ ಸಭೆಯ ನಡಾವಳಿಗೆ ಅನುಮೋದನೆ ನೀಡುವ ಕುರಿತು.
	ತೀರ್ಮಾನ	**ದಿನಾಂಕ: 24.03.2026 ರಂದು ಜರುಗಿದ 2025-26ನೇ ಸಾಲಿನ 3ನೇ ಖರೀದಿ ಸಮಿತಿ ಸಭೆಯ ನಡಾವಳಿಯನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.**
36	2026/04/VI	2025-26ನೇ ಸಾಲಿನ 3ನೇ ಹಾಗೂ ಕೊನೆಯ Work Committee ಸಭೆಯ ನಡಾವಳಿಗೆ ಅನುಮೋದನೆ ನೀಡುವ ಕುರಿತು.
	ತೀರ್ಮಾನ	**ದಿನಾಂಕ: 24.03.2026 ರಂದು ಜರುಗಿದ 2025-26ನೇ ಸಾಲಿನ 3ನೇ ಹಾಗೂ ಕೊನೆಯ Work Committee ಸಭೆಯ ನಡಾವಳಿಯನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.**
37	2026/04/VII	ವಿಶ್ವವಿದ್ಯಾಲಯದ ಪ್ರಾಧ್ಯಾಪಕರ ಕುರಿತಂತೆ ಮಾನ್ಯ ಗೌರವಾನ್ವಿತ ರಾಜ್ಯಪಾಲರು ನೀಡಿರುವ ಸೂಚನೆಗಳನ್ನು ಪಾಲಿಸುವ ಕುರಿತು.
	ತೀರ್ಮಾನ	**ಪ್ರೊ ಕೆ ಎಲ್ ಎನ್ ಮೂರ್ತಿ, ಪ್ರಾಧ್ಯಾಪಕರು, ಇತಿಹಾಸ ವಿಭಾಗ ಇವರನ್ನು ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಲಾಗಿದೆ ಹಾಗೂ ಸದರಿ ಪ್ರಾಧ್ಯಾಪಕರು ಅಮಾನತ್ತಿನ ಆದೇಶಕ್ಕೆ ನ್ಯಾಯಾಲಯದಿಂದ ತಡೆಆಜ್ಞೆ ಸಲ್ಲಿಸಿರುತ್ತಾರೆ. ಇದಕ್ಕೆ ಸಂಬಂಧಿಸಿದಂತೆ, ಮಾನ್ಯ ಗೌರವಾನ್ವಿತ ರಾಜ್ಯಪಾಲರ ಅಧೀನ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು ಇವರ ಪತ್ರ ಸಂ: GS 01 CUM 2026. Date: 14.01.2026 ರಲ್ಲಿ ಪ್ರೊ. ಕೆ. ಎಲ್. ಎನ್. ಮೂರ್ತಿ, ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸ್ನಾತಕೋತ್ತರ ಕೇಂದ್ರ, ವಿಜಯಪುರ ಇವರ ನ್ಯಾಯಾಲಯದಲ್ಲಿ ಹೂಡಿರುವ ಪ್ರಕರಣದ ಕುರಿತಾಗಿ ನಿಯಮಾನುಸಾರ ಕ್ರಮ ಕೈಗೊಳ್ಳಲು ತಿಳಿಸಿರುತ್ತಾರೆ. ಪ್ರತ್ಯುತ್ತರವಾಗಿ ಈ ಕಛೇರಿ ಪತ್ರ ಸಂಖ್ಯೆ ರಾಚವಿ/ಬೆಳಗಾವಿ/ಕುಸಕಾ/ಸಿಆಸುವಿ/2025-26/5623, ದಿನಾಂಕ: 23.01.2026 ರಲ್ಲಿ ಪ್ರಕರಣದ ಕುರಿತಾಗಿ ಸೂಕ್ತ ದಾಖಲಾತಿಗಳೊಂದಿಗೆ ಮಾನ್ಯರ ಅವಗಾಹನೆಗಾಗಿ ಮತ್ತು ನಿರ್ದೇಶನಕ್ಕಾಗಿ ಸಲ್ಲಿಸಲಾಗಿತ್ತು.** **ಪ್ರತ್ಯುತ್ತರವಾಗಿ ಗೌರವಾನ್ವಿತ ರಾಜ್ಯಪಾಲರ ವಿಶೇಷ ಕಾರ್ಯದರ್ಶಿ, ಲೋಕ ಭವನ, ಬೆಂಗಳೂರು ಇವರು ಪ್ರೊ. ಕೆ. ಎಲ್. ಎನ್. ಮೂರ್ತಿ, ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಇವರನ್ನು ಸೇವೆಯಿಂದ ಅಮಾನತ್ತುಗೊಳಿಸಿ 06 ತಿಂಗಳು ಪೂರ್ಣಗೊಂಡಿರುವುದರಿಂದ ಅಮಾನತ್ತಿನ ಆದೇಶವನ್ನು ರದ್ದುಗೊಳಿಸುವುದು ಹಾಗೂ ಓರ್ವ ನಿವೃತ್ತ ಜಿಲ್ಲಾ ನ್ಯಾಯಾಧೀಶರನ್ನು ನಿಯೋಜಿಸಿ ಇಲಾಖಾ ವಿಚಾರಣೆಯನ್ನು ಕೈಗೊಂಡು 03 ತಿಂಗಳಲ್ಲಿ ವರದಿಯನ್ನು ಸಲ್ಲಿಸಲು ತಿಳಿಸಿರುತ್ತಾರೆ. ಕಾರಣ, ಸದರಿ ಪ್ರಕರಣಕ್ಕೆ ಸಂಬಂಧಿಸಿ ಮುಂದಿನ ಕ್ರಮ ವಹಿಸಲು ಸಭೆಯ ಮಾರ್ಗದರ್ಶನ ಕೋರಲಾಯಿತು.** **ಚರ್ಚಿಸಿದ ಸಭೆಯು, ಪ್ರೊ. ಕೆ. ಎಲ್. ಎನ್. ಮೂರ್ತಿ, ಪ್ರಾಧ್ಯಾಪಕರು, ಇತಿಹಾಸ ವಿಭಾಗ ಇವರನ್ನು ಅಮಾನತ್ತುಗೊಳಿಸಿರುವ ಆದೇಶವನ್ನು ರದ್ದುಪಡಿಸಿ, ಸದರಿ ಪ್ರಾಧ್ಯಾಪಕರನ್ನು ಸೇವೆಗೆ ಹಾಜರುಪಡಿಸಿಕೊಳ್ಳಲು ತೀರ್ಮಾನಿಸಿತು ಹಾಗೂ ಓರ್ವ ನಿವೃತ್ತ ಜಿಲ್ಲಾ ನ್ಯಾಯಾಧೀಶರನ್ನು ನಿಯೋಜಿಸಿ ಇಲಾಖಾ ವಿಚಾರಣೆಯನ್ನು ನಡೆಸಲು ನಿರ್ಧರಿಸಿತು. ಇಲಾಖಾ ವಿಚಾರಣೆ ಪೂರ್ಣಗೊಳ್ಳುವವರೆಗೆ ಮುಖ್ಯ ಆವರಣದಲ್ಲಿ ಪ್ರಾಧ್ಯಾಪಕರಾಗಿ ಮಾತ್ರ ಕಾರ್ಯನಿರ್ವಹಿಸುವುದು ಹಾಗೂ ಯಾವುದೇ ಗುರುತರ ಜವಾಬ್ದಾರಿಗಳನ್ನು ನೀಡದಿರಲು ಸಭೆಯು ಪರತ್ತು ವಿಧಿಸಿತು.**
38	2026/04/VIII	ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಧೀನದ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದಲ್ಲಿ ಮರಾಠಿ ವಿಷಯವನ್ನು ಪ್ರಾರಂಭಿಸುವ ಕುರಿತು

	ತೀರ್ಮಾನ	**2026-27 ನೇ ಶೈಕ್ಷಣಿಕ ಸಾಲಿಗೆ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದಲ್ಲಿ ಸ್ನಾತಕ ಕೋರ್ಸಗಳಲ್ಲಿ ಮರಾಠಿ ವಿಷಯವನ್ನು ಭಾಷಾ ವಿಷಯವನ್ನಾಗಿ ಪ್ರಾರಂಭಿಸಲು ಸಭೆಯು ತೀರ್ಮಾನಿಸಿತು.**
39	2026/04/IX	ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸ್ನಾತಕ ನೂತನ ಪಠ್ಯಕ್ರಮದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಂಧಿಸಿದ ಪತ್ರಿಕೆಗಳ Integrated Course ನ್ನು ಅಳವಡಿಸುವ ಕುರಿತು
	ತೀರ್ಮಾನ	**ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಬೋಧಿಸಲಾಗುತ್ತಿರುವ ಪಠ್ಯಕ್ರಮದಲ್ಲಿ ಹಾಗೂ ಸ್ಪರ್ಧಾತ್ಪಕ ಪರೀಕ್ಷೆಗಳಲ್ಲಿ ಕೇಳಲಾಗುತ್ತಿರುವ ಪ್ರಶ್ನೆ ಪತ್ರಿಕೆಗಳಲ್ಲಿ ಅಜಾಗಜಾಂತರ ವ್ಯತ್ಯಾಸವಿರುವುದರಿಂದ Integrated Course ನ್ನು ಅಳವಡಿಸುವುದು ಅವಶ್ಯವಿರುತ್ತದೆ ಎಂದು ಸದಸ್ಯರಾದ ಡಾ. ಮಹಾಂತೇಶ ಕಂಬಾರ ಸಭೆಗೆ ತಿಳಿಸಿದರು.** **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸ್ನಾತಕ ನೂತನ ಪಠ್ಯಕ್ರಮದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಂಧಿಸಿದ ಪತ್ರಿಕೆಗಳ Integrated Course ನ್ನು ನಿಗದಿಪಡಿಸಲಾಗಿರುವ ಕ್ರೆಡಿಟ್ಸ್ ಗಳಿಗನುಗುಣವಾಗಿ ಅಳವಡಿಸಲು ಸಭೆಯು ತೀರ್ಮಾನಿಸಿತು.**
40	2026/04/X	ಸ್ವಾಯತ್ತ ಕಾಲೇಜಿನಲ್ಲಿ ಎಂ.ಎ. ಪತ್ರಿಕೋದ್ಯಮ (Journalism) ಕೋರ್ಸ್‌ಗೆ ಸರ್ಕಾರದ ಕೋಟಾ ಸೀಟುಗಳನ್ನು ಹೆಚ್ಚಿಸುವ ಕುರಿತು ವಿನಂತಿ ಪ್ರವೇಶಾತಿ ವಿಷಯ ಕುರಿತು
	ತೀರ್ಮಾನ	**ಎಂ.ಎ. ಪತ್ರಿಕೋದ್ಯಮ (Journalism) ಕೋರ್ಸ್‌ನಲ್ಲಿ 2025-26 ನೇ ಸಾಲಿನಲ್ಲಿ ಒಟ್ಟು 70 ಸೀಟುಗಳಿರುತ್ತವೆ. ಆದರೆ 21 ಸೀಟುಗಳು ಮಾತ್ರ ಪ್ರವೇಶಾತಿ ಆಗಿರುತ್ತವೆ. ಪ್ರಸ್ತುತ ವರ್ಷದಿಂದ ಪ್ರವೇಶಾತಿ ಅರ್ಜಿ ಸಂಖ್ಯೆಗಳನ್ನು ಗಮನಿಸಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಅರ್ಜಿ ಸಂಖ್ಯೆ ಕಡಿಮೆ ಇದ್ದು ಬೇರೆ ವಿಶ್ವವಿದ್ಯಾಲಯ ಮತ್ತು ಸ್ವಾಯತ್ತ ಕಾಲೇಜ ಅರ್ಜಿಗಳು ಹೆಚ್ಚಿದ್ದಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸೀಟ್‌ಗೆ ಮೀಸಲಿಟ್ಟ 40 ಸೀಟಗಳನ್ನು ಪರಿವರ್ತಿಸಿ ಅಂತಿಮ ಸುತ್ತಿನಲ್ಲಿ ನೀಡಲು ಸಭೆಯು ಅನುಮೋದಿಸಿತು.**
41	2026/04/XI	**ತೃತೀಯ ಲಿಂಗಿ, ದೇವದಾಸಿಯ ಮಕ್ಕಳು ಹಾಗೂ 2 HIV ಸೋಂಕಿತ ವ್ಯಕ್ತಿಗಳಿಗೆ ಸಮಾಜವು ಕೀಳಾಗಿ ಕಾಣುತ್ತದೆ. ಸಮಾಜದಲ್ಲಿ ಇವರುಗಳ ಕುರಿತು ಇರುವ ಕಳಂಕವನ್ನು ಕಡಿಮೆ ಮಾಡಲು ಹಾಗೂ ಅವರನ್ನು ಸಮಾನವಾಗಿ ಕಾಣುವ ಉದ್ದೇಶದಿಂದ, 2026-27 ನೇ ಶೈಕ್ಷಣಿಕ ವರ್ಷಕ್ಕೆ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಕಾಲೇಜು, ಬೆಳಗಾವಿ ಇಲ್ಲಿ ಪ್ರವೇಶಾತಿಯಲ್ಲಿ ಅರ್ಜಿ ಸಲ್ಲಿಸುವ ತೃತೀಯ ಲಿಂಗಿ, ದೇವದಾಸಿಯ ಮಕ್ಕಳು ಹಾಗೂ 2 HIV ಸೋಂಕಿತ ವಿದ್ಯಾರ್ಥಿಗಳಿಗೆ ಸ್ನಾತಕ ಕೋರ್ಸಗಳಿಗೆ ಸರ್ಕಾರಕ್ಕೆ ಭರಿಸಬೇಕಾದ ಕೆಲವು ಶಿರ್ಷೀಕೆಗಳ ಶುಲ್ಕಗಳನ್ನು ಅಂದರೆ NSS, Red Cross ಹಾಗೂ ಇತ್ಯಾದಿ ಅತ್ಯಲ್ಪ ಶುಲ್ಕಗಳನ್ನು ಮಾತ್ರ ಭರಿಸಿಕೊಳ್ಳಲು ಸಭೆಯು ತೀರ್ಮಾನಿಸಿತು.**
42	2026/04/XII	**2026-27 ನೇ ಶೈಕ್ಷಣಿಕ ಸಾಲಿಗೆ ಸ್ನಾತಕ ವಿವಿಧ ಕೋರ್ಸ್‌ಗಳಿಗೆ ಹಿಂದಿನ ಸಾಲಿನ ಶುಲ್ಕವನ್ನು ಆಕರಿಸಬೇಕೋ ಅಥವಾ ಪ್ರತಿ ವರ್ಷದಂತೆ 10% ಹೆಚ್ಚುವರಿಯಾಗಿ ಶುಲ್ಕ ಆಕರಣೆ ಮಾಡಿಕೊಳ್ಳುವ ಕುರಿತು ಸಭೆಯ ಮಾರ್ಗದರ್ಶನ ಕೋರಲಾಯಿತು.** **ಚರ್ಚಿಸಿದ ಸಭೆಯು, 2026-27 ನೇ ಶೈಕ್ಷಣಿಕ ಸಾಲಿಗೆ ಸ್ನಾತಕ ವಿವಿಧ ಕೋರ್ಸ್‌ಗಳಿಗೆ ಪ್ರಥಮ ಮತ್ತು ತೃತೀಯ ಸೆಮಿಸ್ಟರ್‌ಗೆ ಪ್ರಸ್ತುತ ಇರುವ ಶುಲ್ಕಕ್ಕೆ ರೂ. 150/- Non-Profession Course ಗೆ ಮತ್ತು ರೂ. 200/- Profession Course ಗೆ ಹಾಗೂ 5ನೇ ಸೆಮೆಸ್ಟರ್ ಗೆ ಹಿಂದಿನ ಸಾಲಿನ ಶುಲ್ಕಕ್ಕೆ 10% ಪ್ರವೇಶಾತಿ ಶುಲ್ಕವನ್ನು ಹೆಚ್ಚಿಸಲು ಸಭೆಯು ತೀರ್ಮಾನಿಸಿತು.**

43	2026/04/XIII	ಡಾ. ಬಸವರಾಜ ಬಗಾಡೆ, ಸಹಾಯಕ ಪ್ರಾಧ್ಯಾಪಕರು, ಭೂಗೋಳಶಾಸ್ತ್ರ ವಿಭಾಗ ಇವರು ಮಗಧ ವಿಶ್ವವಿದ್ಯಾಲಯ, ಬೋಧಗಯಾ, ಬಿಹಾರ ಇಲ್ಲಿಂದ ಪಡೆದ ಪಿಎಚ್.ಡಿ. ಪದವಿ ಪ್ರಮಾಣ ಪತ್ರದ ನೈಜತೆಗೆ ಸಂಬಂಧಿಸಿದ ಕುರಿತು.
	ತೀರ್ಮಾನ	**ಮಹಾಲೇಖಪಾಲರು CAG Audit Enquiry No: 08 "Irregular acceptance of Ph.D. degree through course work for exemption of NET qualification resulted in irregular appointment in the cadre of Assistant Professor of Shri. Dr. Basavaraj R. Bagade" ಎಂದು ಆಕ್ಷೇಪಿಸಿರುತ್ತಾರೆ. ಸದರಿ ಆಕ್ಷೇಪಣೆಗೆ ಸಂಬಂಧಿಸಿದಂತೆ, ಪಿಎಚ್.ಡಿ ಪದವಿ ಪ್ರಮಾಣ ಪತ್ರದ ಬಗ್ಗೆ ನೈಜತೆಯನ್ನು ಪರಿಶೀಲಿಸುವುದಕ್ಕಾಗಿ ವಿಶ್ವವಿದ್ಯಾಲಯದಿಂದ ಓರ್ವ ಪ್ರಾಧ್ಯಾಪಕರನ್ನು ಮಗಧ ವಿಶ್ವವಿದ್ಯಾಲಯ, ಬೋಧಗಯಾ, ಬಿಹಾರ ಇಲ್ಲಿಗೆ ಕಳುಹಿಸಲಾಗಿತ್ತು. ಸದರಿ ಪ್ರಾಧ್ಯಾಪಕರು ಮಗಧ ವಿಶ್ವವಿದ್ಯಾಲಯ, ಬೋಧಗಯಾ, ಬಿಹಾರ ಇಲ್ಲಿಗೆ ಭೇಟಿ ನೀಡಿ, ಅಲ್ಲಿಯ ವಿಶ್ವವಿದ್ಯಾಲಯದ ವಿವಿಧ ವಿಭಾಗ/ಅಧಿಕಾರಿಗಳು/ಮಾರ್ಗದರ್ಶಕರಿಂದ ಮಾಹಿತಿಯನ್ನು ಪಡೆದು ವರದಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುತ್ತಾರೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಪಿಎಚ್.ಡಿ. ಪದವಿ ಪ್ರಮಾಣ ಪತ್ರದ ಸತ್ಯಾಸತ್ಯತೆಯನ್ನು ಪರಿಶೀಲಿಸಿ ವರದಿ ಸಲ್ಲಿಸುವುದಕ್ಕಾಗಿ ಓರ್ವ ನಿವೃತ್ತ ನ್ಯಾಯಾಧೀಶರ ಸಮಿತಿಯನ್ನು ರಚಿಸಿ ನೇಮಕ ಮಾಡಲಾಗಿತ್ತು. ಅದರಂತೆ ಸದರಿ ನ್ಯಾಯಾಧೀಶರು 04 ಅಂಶಗಳನ್ನು ಶಿಫಾರಸ್ಸು ಮಾಡಿ ವರದಿ ಸಲ್ಲಿಸಿರುತ್ತಾರೆ. ಸದರಿ ವರದಿಯನ್ನು ಮುಂದಿನ ನಿರ್ದೇಶನಕ್ಕಾಗಿ ಸರ್ಕಾರದ ಉನ್ನತ ಶಿಕ್ಷಣ ಇಲಾಖೆ ಇವರಿಗೆ ಸಲ್ಲಿಸಲಾಗಿತ್ತು. ಸದರಿ ಪತ್ರಕ್ಕೆ ಸರ್ಕಾರದಿಂದ ಡಾ. ಬಸವರಾಜ ಆರ್ ಬಗಾಡೆ ಇವರ ನೇಮಕಾತಿ ಸಕ್ಷಮ ಪ್ರಾಧಿಕಾರವಾದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು ತನಿಖಾ ಸಮಿತಿಯ ಶಿಫಾರಸ್ಸು ಮಾಡಿರುವಂತೆ, ಸದರಿ ಅಧಿಕಾರಿಯವರಿಂದ ಆಗಿರಬಹುದಾದ ಆರ್ಥಿಕ ನಷ್ಟ, ಕ್ರಿಮಿನಲ್ ಪ್ರಕರಣವನ್ನು ದಾಖಲಿಸುವುದು ಮತ್ತು ಅವರು ಪ್ರಸ್ತುತ ಇರುವ ಹುದ್ದೆಯಲ್ಲಿ ಕಾರ್ಯನಿರ್ವಹಿಸದಂತೆ ಅಂಶವಾರು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿರುತ್ತಾರೆ.** **ನಂತರ, ಡಾ. ಬಸವರಾಜ ಆರ್. ಬಗಾಡೆ ಇವರು ದಿನಾಂಕ: 13-01-2025 ರ ಸರ್ಕಾರದಿಂದ ಸ್ವೀಕೃತವಾದ ಪತ್ರಕ್ಕೆ ರಿಟ್ ಅರ್ಜಿ ಸಂಖ್ಯೆ : 100274/2025 ರನ್ವಯ ಮಾನ್ಯ ಉಚ್ಚ ನ್ಯಾಯಾಲಯದ ಮೊರೆ ಹೊಗಿರುತ್ತಾರೆ. ನಂತರ ಸದರಿ ರಿಟ್ ಅರ್ಜಿಗೆ ಸಂಬಂಧಿಸಿದಂತೆ ದಿನಾಂಕ: 04-11-2025 ರಂದು ಮಾನ್ಯ ನ್ಯಾಯಾಲಯವು ನೀಡಿರುವ ಆದೇಶದಂತೆ ವಾರ್ಷಿಕ ವೇತನ ಬಡ್ತಿ ಹಾಗೂ ಸಿ. ಎ. ಎಸ್ ಅಡಿಯಲ್ಲಿ ವೃತ್ತಿ ಪದೋನ್ನತಿ ನೀಡುವಂತೆ ವಿನಂತಿಕೊಂಡಿದ್ದರು. ದಿನಾಂಕ: 04-11-2025 ರಂದು ಮಾನ್ಯ ನ್ಯಾಯಾಲಯವು ನೀಡಿರುವ ಆದೇಶದಂತೆ ಕಾನೂನು ಅಭಿಪ್ರಾಯ ಪಡೆಯಲಾಗಿತ್ತು ಅದರಂತೆ ಸದರಿಯವರಿಗೆ ಪಿಎಚ್.ಡಿ. ಪದವಿಯ ಪ್ರಮಾಣ ಪತ್ರಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ವಿಚಾರಣೆ ವರದಿಯಲ್ಲಿರುವ 04 ಅಂಶಗಳಿಗೆ ವಿವರಣೆ ನೀಡುವಂತೆ ಕೇಳಿ ನೋಟಿಸ್ ಜಾರಿ ಮಾಡಲಾಗಿತ್ತು. ಸದರಿ ಕಾರಣ ಕೇಳಿ ನೋಟಿಸ್‌ಗೆ ಸದರಿಯವರು ನೀಡಿರುವ ಉತ್ತರವನ್ನು ಸಭೆಯ ಗಮನಕ್ಕೆ ತರಲಾಯಿತು. ಸದರಿಯವರು ನೀಡಿರುವ ಉತ್ತರವು ಸಮಂಜಸವಾಗಿರುವುದಿಲ್ಲವಾದ್ದರಿಂದ ಡಾ. ಬಸವರಾಜ ಆರ್. ಬಗಾಡೆ ಇವರ ವಿರುದ್ಧ 1957 ರ ವರ್ಗೀಕರಣ ಅನ್ವಯ ನಿವೃತ್ತ ನ್ಯಾಯಾಧೀಶರ ಅಡಿಯಲ್ಲಿ ಇಲಾಖಾ ವಿಚಾರಣೆ ಕೈಗೊಳ್ಳಲು ಸಭೆಯು ತೀರ್ಮಾನಿಸಿತು.**

<table>
<tr><td>44</td><td>2026/04/XIII</td><td>ಇ-ಸ್ಪರ್ಧಾ App ನ್ನು ಜಾರಿ ಮಾಡುವ ಕುರಿತು</td></tr>
<tr><td></td><td>ತೀರ್ಮಾನ</td><td>ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಧ್ಯಯನ ಮಾಡುತ್ತಿರುವ ಹೆಚ್ಚಿನ ಸಂಖ್ಯೆಯ ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ನಡೆಸುತ್ತಿದ್ದು ಇದಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳು ತರಬೇತಿ ಪಡೆಯುತ್ತಿದ್ದು ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗೆ ದಿನಪತ್ರಿಕೆ, ಮ್ಯಾಗಜೀನಗಳನ್ನು ಖರೀದಿಸುತ್ತಿದ್ದಾರೆ. ಇದರಿಂದಾಗಿ ವಿದ್ಯಾರ್ಥಿಗಳಿಗೆ ಆರ್ಥಿಕ ಹೊರೆ ಉಂಟಾಗುತ್ತಿದೆ.
ಕಾರಣ, ವಿದ್ಯಾರ್ಥಿಗಳಿಗೆ ಅನುಕೂಲವಾಗುವ ದೃಷ್ಟಿಯಿಂದ ವಿಶ್ವವಿದ್ಯಾಲಯದಲ್ಲಿ ಇ-ಸ್ಪರ್ಧಾ App ನ್ನು ಜಾರಿ ಮಾಡಿ ಅದರಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗೆ ಸಂಬಂಧಿಸಿದ ಮಾಹಿತಿಯನ್ನು ಅಳವಡಿಸಿ ವಿದ್ಯಾರ್ಥಿಗಳಿಗೆ ತಲುಪಿಸುವ ಕಾರ್ಯ ಮಾಡಲು "ಇ-ಸ್ಪರ್ಧಾ App" ನ್ನು ಜಾರಿ ಮಾಡಲು ಸಭೆಯು ಅನುಮೋದನೆ ನೀಡಿತು ಹಾಗೂ ಸದರಿ RCU-E-Spardha App ವಿದ್ಯಾರ್ಥಿಗಳಿಗೆ ಕಡ್ಡಾಯಗೊಳಿಸಿ, ರೂ. 200/-ಗಳ ಶುಲ್ಕ ನಿಗದಿಪಡಿಸಲು ಸಭೆ ತೀರ್ಮಾನಿಸಿತು.</td></tr>
<tr><td>45</td><td>2026/04/XIII
I</td><td>ಕಳೆದ 05 ವರ್ಷಗಳಿಗಿಂತ ಹೆಚ್ಚು ಕಾಲ ಒಟ್ಟು 31 ಮಹಾವಿದ್ಯಾಲಯಗಳು ಯಾವುದೇ ರೀತಿಯ ಸಂಯೋಜನೆಗಳಿಗೆ ಅರ್ಜಿ ಸಲ್ಲಿಸದೇ ಹಾಗೂ ವಿದ್ಯಾರ್ಥಿ ಪ್ರವೇಶಾತಿಯನ್ನು ಪಡೆಯದೇ ಇರುವ ಮಹಾವಿದ್ಯಾಲಯಗಳನ್ನು ಸ್ಥಗಿತಗೊಳಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡುವ ಕುರಿತು.</td></tr>
<tr><td></td><td>ತೀರ್ಮಾನ</td><td>ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಧೀನದಲ್ಲಿರುವ ಒಟ್ಟು 31 ಮಹಾವಿದ್ಯಾಲಯಗಳು ಕಳೆದ 05 ವರ್ಷಗಳಿಗಿಂತ ಹೆಚ್ಚು ಕಾಲ ಯಾವುದೇ ರೀತಿಯ ಸಂಯೋಜನೆಗಳಿಗೆ ಅರ್ಜಿ ಸಲ್ಲಿಸದೇ ಹಾಗೂ ವಿದ್ಯಾರ್ಥಿ ಪ್ರವೇಶಾತಿಯನ್ನು ಪಡೆಯದೇ ಇರುವುದರಿಂದ, ಅವುಗಳು ಕೇವಲ ಸಂಖ್ಯೆ ದೃಷ್ಟಿಯಿಂದ ಮಾತ್ರ ಅಸ್ತಿತ್ವದಲ್ಲಿರುವಂತಾಗಿದೆ. ಈ ಹಿನ್ನೆಲೆಯಲ್ಲಿ, ಸದರಿ ಮಹಾವಿದ್ಯಾಲಯಗಳ ಸ್ಥಗಿತಕ್ಕಾಗಿ ಅಭಿಪ್ರಾಯವನ್ನು ಕೋರಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000ರ ಪ್ರಕರಣ 63(3)ರಡಿ ಒಟ್ಟು ಮೂರು ಬಾರಿ ತಿಳುವಳಿಕೆ ಪತ್ರಗಳನ್ನು ಕಳುಹಿಸಲಾಗಿದೆ. ಇದಕ್ಕೆ ಪೂರಕವಾಗಿ, ಮಹಾವಿದ್ಯಾಲಯಗಳು ಸಲ್ಲಿಸಿರುವ ಸ್ಪಷ್ಟೀಕರಣಗಳ ವಿವರಗಳನ್ನು ಈ ಕೆಳಕಾಣಿಸಿದಂತೆ ವಿವರವನ್ನು ಸಭೆಗೆ ನೀಡಲಾಯಿತು.
<table>
<tr><th rowspan="2">ಕ್ರಮ ಸಂ</th><th rowspan="2">05 ವರ್ಷಗಳಿಗಿಂತ ಹೆಚ್ಚು ಕಾಲ ಅರ್ಜಿ ಸಲ್ಲಿಸದೇ ಇರುವ ಮಹಾವಿದ್ಯಾಲಯಗಳ ಒಟ್ಟು ಸಂಖ್ಯೆ</th><th colspan="2">KSU Act, 2000ರ ಪ್ರಕರಣ 63(3)ರ ಅನ್ವಯ ನೀಡಿದ ತಿಳುವಳಿಕೆ ಪತ್ರಗಳಿಗೆ</th></tr>
<tr><th>ಸ್ಪಷ್ಟೀಕರಣ ನೀಡಿರುವ ಮಹಾವಿದ್ಯಾಲಯಗಳ ಸಂಖ್ಯೆ</th><th>ಸ್ಪಷ್ಟೀಕರಣ ನೀಡದ ಮಹಾವಿದ್ಯಾಲಯಗಳ ಸಂಖ್ಯೆ</th></tr>
<tr><td>1</td><td>31</td><td>14</td><td>17</td></tr>
</table>
ಚರ್ಚಿಸಿದ ಸಭೆಯು, ಸದರಿ ಮಹಾವಿದ್ಯಾಲಯಗಳು ಕೇವಲ ಸಂಖ್ಯೆ ದೃಷ್ಟಿಯಿಂದ ಅಸ್ತಿತ್ವದಲ್ಲಿದ್ದು, ಸಂಯೋಜನೆಗಳಿಗೆ ಅರ್ಜಿ ಸಲ್ಲಿಸದೇ ಹಾಗೂ ವಿದ್ಯಾರ್ಥಿ ಪ್ರವೇಶಾತಿಯನ್ನು ಪಡೆಯದೇ ಇರುವ ಹಿನ್ನೆಲೆಯಲ್ಲಿ, ಇಂತಹ ಮಹಾವಿದ್ಯಾಲಯಗಳನ್ನು ಸ್ಥಗಿತಗೊಳಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಲು ತೀರ್ಮಾನಿಸಿತು.</td></tr>
<tr><td>46</td><td>2026/04/XIII
I</td><td>2026-27ನೇ ಶೈಕ್ಷಣಿಕ ಸಾಲಿನಲ್ಲಿ NCTE ಯಿಂದ ITEP ಕೋರ್ಸುಗಳಿಗೆ ಅರ್ಜಿ ಸಲ್ಲಿಸಲು ಹಾಗೂ ಸಂಯೋಜನೆ ಪ್ರಕ್ರಿಯೆ ಪೂರ್ಣಗೊಳಿಸುವ ಕುರಿತು.</td></tr>
</table>

	ತೀರ್ಮಾನ	**ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಧೀನದಲ್ಲಿರುವ ಒಟ್ಟು 03 ಮಹಾವಿದ್ಯಾಲಯಗಳು 2026-27ನೇ ಶೈಕ್ಷಣಿಕ ಸಾಲಿನಲ್ಲಿ NCTE ಯಿಂದ ITEP ಕೋರ್ಸುಗಳನ್ನು ಪ್ರಾರಂಭಿಸಲು ನಿಯಮಾನುಸಾರ UUCMS Portal ನಲ್ಲಿ ಅರ್ಜಿಗಳನ್ನು ಸಲ್ಲಿಸಲು ಹಾಗೂ ಸಂಯೋಜನಾ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ಸರ್ಕಾರಕ್ಕೆ ಸಲ್ಲಿಸಲು ಸಭೆಯು ಅನುಮೋದನೆ ನೀಡಿತು.**

ಕೊನೆಯದಾಗಿ, ಎಲ್ಲ ಸದಸ್ಯರುಗಳಿಗೆ ವಂದನೆಯನ್ನು ಸಲ್ಲಿಸುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು **ಕುಲಪತಿಗಳು ಹಾಗೂ ಅಧ್ಯಕ್ಷರು**

ಇವರಿಗೆ,

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಎಲ್ಲ ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ

ಪ್ರತಿ ಮಾಹಿತಿಗಾಗಿ : ಹಣಕಾಸು ಅಧಿಕಾರಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ – ೦೪, ಭೂತರಾಮನಹಟ್ಟಿ, ಬೆಳಗಾವಿ – ೫೯೧೫೬

(ನ್ಯಾಕ್ ಮಾನ್ಯತೆ B+ ಗ್ರೇಡ್– 2021)PM-USHA (MERU)

RANI CHANNAMMA UNIVERSITY

Vidyasangama, National Highway – 04, Bhootaramanahatti, Belagavi – 591156

(NAAC Accredited with B+ Grade – 2021) PM-USHA (MERU)

E-mail: registrar@rcub.ac.in ಕುಲಸಚಿವರ ಕಾರ್ಯಾಲಯ Website: www.rcub.ac.in

Office of the Registrar Phone No.: 0831-2565234

ಕ್ರ.ಸಂ.: ರಾಚವಿಬೆ/ಕುಸಕಾ/ಜಿಎಡಿ/ಸಿಂಡಿಕೇಟ್/2026-27/ 279 ದಿನಾಂಕ: 16 APR 2026

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ
ಎಲ್ಲಾ ಸಿಂಡಿಕೇಟ್ ಸದಸ್ಯರುಗಳಿಗೆ,

ಮಾನ್ಯರೆ,

ವಿಷಯ: ದಿನಾಂಕ: 06-04-2026 ರಂದು ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಯ ಪ್ರತಿಯನ್ನು ಕಳುಹಿಸುವ ಕುರಿತು.

ಉಲ್ಲೇಖ: ಸಿಂಡಿಕೇಟ್ ಸಭೆ ನಡೆದ ದಿನಾಂಕ : 06-04-2026

ದಿನಾಂಕ : 06-04-2026 ರಂದು ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯಲ್ಲಿ ಮಾಡಿರುವ ಚರ್ಚೆ ಮತ್ತು ಕೈಕೊಳ್ಳಲಾಗಿರುವ ನಿರ್ಣಯಗಳ ಪ್ರತಿಯನ್ನು ಈ ಮೂಲಕ ತಮ್ಮ ಅವಗಾಹನೆಗಾಗಿ ಮತ್ತು ಧೃಡೀಕರಣಕ್ಕಾಗಿ ಕಳಿಸುತ್ತಿದ್ದೇನೆ. ಇದರಲ್ಲಿರುವ ಯಾವುದೇ ವಿಷಯಗಳ ಬಗ್ಗೆ ತಮ್ಮ ಸಹಮತಿ ಇಲ್ಲದಿದ್ದಲ್ಲಿ ಲಿಖಿತವಾಗಿ ಅಗತ್ಯ ಟಿಪ್ಪಣಿಗಳೊಂದಿಗೆ ದಿನಾಂಕ : 22-04-2026ರ ಒಳಗೆ ವಿಶ್ವವಿದ್ಯಾಲಯಕ್ಕೆ ಇ-ಮೇಲ್ ಮುಖಾಂತರ ಸಲ್ಲಿಸಲು ಕೋರಿದೆ.

ಯಾವುದೇ ವಿಷಯದ ಅಸಹಮತಿಯ, ಲಿಖಿತ ಟಿಪ್ಪಣಿ ನಿಗಧಿತ ಸಮಯದಲ್ಲಿ ಸ್ವೀಕರಿಸದೇ ಇದ್ದಲ್ಲಿ, ಎಲ್ಲಾ ವಿಷಯಗಳಿಗೆ ತಮ್ಮ ಧೃಡೀಕರಣ ಇದೆಯೆಂದು ಭಾವಿಸಿ, ಮುಂದಿನ ಕ್ರಮ ಜರುಗಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಸಂತೋಷ ಕಾಮಗೌಡ ಕೆ.ಎ.ಎಸ್.
ಕುಲಸಚಿವರು